ಮೇ 2012 ಸಂಪುಟ 5 ಸಂಚಿಕೆ 3

ಶ್ರೀ ರಾಮಚಂದ್ರ ಮಿಷನ್®

India ECHOES

ONE WORLD ONE HUMANITY





## ಗುರುಗಳ ಬಗ್ಗೆ ವರದಿ

ಫೆಬ್ರವರಿ 18ರ ಶನಿವಾರ ಪೂರ್ವಾಹ್ನ ಸುಮಾರು 10.30 ಗಂಟೆಗೆ ಗುರುಗಳು ಗಾಯತ್ರಿಯಿಂದ ಆಶ್ರಮಕ್ಕೆ ಬಂದರು. ಸತ್ಸಂಗವು ಆಗತಾನೆ ಮುಗಿದಿದ್ದು ಅಭ್ಯಾಸಿಗಳು ಅವರನ್ನು ಸ್ವಾಗತಿಸಲು ಸಾಲಾಗಿ ನಿಂತಿದ್ದರು.

ಗುರುಗಳು ತನ್ನ ಕಛೇರಿಯಲ್ಲಿ CCTVಯ ಮೂಲಕ IT ಕಾರ್ಯಾಗಾರದ ನಡಾವಳಿಗಳನ್ನು ಅವಲೋಕಿಸಿದರು. ಸೋ. ಕಮಲೇಶ್ ಮತ್ತು ಸೋ. ಪಿ.ಆರ್. ಕೃಷ್ಣ ಅವರ ಭಾಷಣಗಳನ್ನು ಆಲಿಸಿದರು. ಅವರು ಎಲ್ಲ ಭಾಷಣಗಳನ್ನೂ ಉತ್ಸುಕತೆಯಿಂದ ಆಲಿಸಿ ಪ್ರಶ್ನೆಗಳನ್ನು ಕೇಳಿದರು. ಮಧ್ಯಾಹ್ನದೂಟದ ನಂತರ ಅವರಿಗೆ, ಮರುದಿನ ಸತ್ಸಂಗದ ಬಳಿಕ ಕೆಲ ಹೊಸ ಡಿವಿಡಿಗಳನ್ನು ಬಿಡುಗಡೆ ಮಾಡಲಿಕ್ಕಿದೆಯೆಂದು ತಿಳಿಸಲಾಯಿತು. ಅವರೆಂದರು, "ಅವುಗಳ ಬಿಡುಗಡೆಗೆ ದಯವಿಟ್ಟು ಬೇರೆ ಯಾರನ್ನಾದರೂ ಹುಡುಕಿ. ಇನ್ನು ಮುಂದೆ ನಾನು ಪ್ರಾಣಾಹುತಿಯನ್ನು ನೀಡಲು ಮಾತ್ರ ಬರುತ್ತೇನೆ. ನಾನು ಮರುಪ್ರಸಾರಕ್ಕೆ ಬಳಸಲ್ಪಡುವ ಟೆಲಿಗ್ರಾಫ್ ಕಂಬದ ಹಾಗೆ". ಫೆಬ್ರವರಿ 19ರ ರವಿವಾರದಂದು ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟರು. ತದನಂತರ ಪ್ರಕಟಣಾತಂಡವು ಕೆಲವು ದೃಶ್ಯ–ಶ್ರವ್ಯ ಮುದ್ರಿಕೆಗಳ ಬಿಡುಗಡೆಯನ್ನು ಮಾಡಿತು.

## ಉತ್ತರ ಅಮೆರಿಕಾ ವಿಚಾರಸಂಕಿರಣ

ಫೆಬ್ರವರಿ 20ರ ಸೋಮವಾರದಂದು ಉತ್ತರ ಅಮೆರಿಕಾ ವಿಚಾರ ಸಂಕಿರಣ ಆರಂಭವಾಯಿತು. ತನ್ನ ಅಸ್ವಸ್ಥ ದೇಹಸ್ಥಿತಿಯ ಹೊರತಾಗಿಯೂ ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟರು. ಸಾಯಂಕಾಲ ಅಮೇರಿಕಾದಿಂದ ಬಂದ ಹೊಸ ಅಭ್ಯಾಸಿಗಳ ಗುಂಪೊಂದು ಹಜಾರದಲ್ಲಿ ಸೇರಿತ್ತು. ಗುರುಗಳು ತುಂಬ ಸಂತೋಷದಿಂದ ಅವರನ್ನು ಭೇಟಿಯಾಗಿ, ಎಲ್ಲರ ಹೃದಯಗಳನ್ನು ತಟ್ಟುವಂಥ, ಪ್ರೇರಣಾತ್ಮಕ ಭಾಷಣವೊಂದನ್ನು ಮಾಡಿದರು. ಅಮೆರಿಕಾ ವಿಚಾರಸಂಕಿರಣದ ವಾರದಲ್ಲಿ ಅವರು ಪ್ರತಿದಿನ ಬೆಳಿಗ್ಗೆ ಮೂವರು ಪ್ರಶಿಕ್ಷಕರನ್ನು ತಯಾರು ಮಾಡುತ್ತಿದ್ದರು. ಅದು ಅವರಿಗೆ ಅತೀವ ಬಳಲಿಕೆಯನ್ನುಂಟುಮಾಡುತ್ತಿತ್ತು. ಅಸ್ವಾಸ್ಥ್ಯ ಮತ್ತು ಆಯಾಸದ ಹೊರತಾಗಿಯೂ ಅವರು ಅವಿರತವಾಗಿ ಕೆಲಸ ಮಾಡುತ್ತಿದ್ದರು.

ಫೆಬ್ರವರಿ 21ರ ಮಂಗಳವಾರ ಗುರುಗಳು ಧ್ಯಾನ ಮಂದಿರದಲ್ಲಿ ನಡೆದ AGM ಸಭೆಗೆ ಹಾಜರಾದರು ಮತ್ತು "ನಿಮ್ಮ ಸಂಪೂರ್ಣ ಹೃದಯವನ್ನು ಕೊಡಿ" ಎಂಬ ತೀಕ್ಷ್ಣವಾದ ಭಾಷಣವೊಂದನ್ನು ಮಾಡಿದರು. ಆ ಭಾಷಣದ ಕೆಲವು ತುಣುಕುಗಳು :



- ಸಹಜಮಾರ್ಗದಲ್ಲಿ ನಾವು ನಮ್ಮ ಪ್ರಯತ್ನದಿಂದ ತೀರ್ಮಾನಿಸಲ್ಪಡುತ್ತೇವೆ, ನಾವು ಏನನ್ನು ಸಾಧಿಸಲು ಶಕ್ತರಿದ್ದೇವೆ ಎಂಬುದರಿಂದಲ್ಲ.
- ಪ್ರೇಮವನ್ನು ಕೊಡುವುದಕ್ಕೆ ಏನೂ ಖರ್ಚು ಆಗುವುದಿಲ್ಲ, ಆದರೆ ನಾವು ಅದನ್ನೇ ತಡೆ ಹಿಡಿಯುತ್ತೇವೆ.
- ಸುಖಪಡಲಿಕ್ಕೆಂದು ದೇವರು ನಮಗೆ ಏನನ್ನೂ ಕೊಡಲಿಲ್ಲ. ಪಂಚೇಂದ್ರಿಯಗಳಲ್ಲಿ ಯಾವುದನ್ನೂ ಸುಖಕ್ಕಾಗಿ ಉಪಯೋಗಿಸುವಂತಿಲ್ಲ. ಪಂಚೇಂದ್ರಿಯಗಳು ನಮಗೆ ಜೀವನದಲ್ಲಿ ಮಾರ್ಗದರ್ಶನ ಮಾಡುವ ಸಲುವಾಗಿ ಇವೆ.
- ನಿಮ್ಮ ಹೃದಯವನ್ನು ಭಗ್ನವಾಗದಂತಿರಿಸಲು ಅಧ್ಯಾತ್ಮವು ನಿಮಗೆ ಸಹಾಯಮಾಡುತ್ತದೆ.

ಫೆಬ್ರವರಿ 22ರ ಬುಧವಾರದಂದು, ಸೋದರಿ ಕಸ್ತೂರಿಯವರ ದೇಹಾಂತ್ಯವಾದ ಸುದ್ದಿ ಗುರುಗಳಿಗೆ ಸಿಕ್ಕಿತು. ಹೈದರಾಬಾದ್ ಆಶ್ರಮದಲ್ಲಿ ಯುವ ಅಭ್ಯಾಸಿಯೊಬ್ಬರು ಕುಸಿದು ಮೃತರಾದರೆಂಬುದರಿಂದಾಗಿಯೂ ಅವರು ತುಂಬ ದುಃಖಿತರಾಗಿದ್ದರು.

ವಿಚಾರಸಂಕಿರಣ ವಾರದಲ್ಲಿ ಒಂದುದಿನ, ಮಲಗಲು ಹೋಗುವ ಸ್ವಲ್ಪ ಮುಂಚೆ, ಗುರುಗಳು, ತನಗೆ ನಿದ್ರೆ ಬಾರದೇನೊ ಎಂಬರ್ಥದಲ್ಲಿ,"ನನಗೆ ಇದು 'ಶಿವರಾತ್ರಿ'ಯಾಗುವಂತೆ ಕಾಣುತ್ತಿದೆ" ಎಂದರು. ಮರುದಿನ, ಆ ಇಡೀ ರಾತ್ರಿ ಗುರುಗಳು ನಿದ್ರಿಸಲಿಲ್ಲವೆಂದು ಅವರ ವೈದ್ಯರು ಹೇಳಿದರು. ವಾಡಿಕೆಯಂತೆ ಅಲ್ಲಿ ಗುರುಗಳನ್ನು ಭೇಟಿಯಾಗಲು ಬಯಸುತ್ತಿರುವ ಅಭ್ಯಾಸಿಗಳ ಏಕಪ್ರಕಾರವಾದ ಪ್ರವಾಹವಿತ್ತು ಮತ್ತು ಅವರು ತಮಗೆ ಸಾಧ್ಯವಾದಾಗಲೆಲ್ಲ ಅಭ್ಯಾಸಿಗಳನ್ನು ಭೇಟಿಯಾಗಲು ತಮ್ಮ ಕೈಲಾದುದನ್ನು ಮಾಡುತ್ತಿದ್ದರು.

ಮಾರ್ಚ್ 1ರ ಗುರುವಾರ, ಬೆಳಗಿನ ಉಪಾಹಾರದ ನಂತರ ಮಾತನಾಡುತ್ತಿರುವಾಗ ಗುರುಗಳು, ಆರ್ಥರ್ ಕೋಸ್ಲರ್ ಬರೆದ ಕೆಲ ಪುಸ್ತಕಗಳನ್ನು ಉಲ್ಲೇಖಿಸಿ ಶಿಫಾರಸು ಮಾಡುತ್ತ ಹೀಗೆಂದರು :

- ನೀವು ನಿಮಗೆ ತರಬೇತಾಗಿರುವ ಹಾಗೆ ವಿಷಯಗಳನ್ನು ನೋಡುತ್ತೀರಿ. ವಿಚಾರವನ್ನು ಮೀರಿಹೋಗಲು, ನಿಮಗೆ ವಿಷಯಗಳ, ಕಲೆ, ವಿಜ್ಞಾನ

ಮುಂತಾದವುಗಳನ್ನು ತಿಳಿಯುವ ಅಗತ್ಯವಿದೆ.

- ಕಡುದುಃಖಗಳು ಮಾನವನಲ್ಲಿರುವ ಅತ್ಯುತ್ತಮವಾದುದನ್ನು ಹೊರಗೆ ತರುತ್ತವೆ ಯಾಕೆಂದರೆ ನೋವು ಹಾಗೆ ಮಾಡುತ್ತದೆ. ಹರ್ಷವು ತದ್ವಿರುದ್ಧವನ್ನು – ಮಾನವರಲ್ಲಿನ ಅತ್ಯಂತ ಕೆಟ್ಟದನ್ನು ಹೊರತರುತ್ತದೆ.
- ಅದರಲ್ಲೇನೂ ಒಳ್ಳೆಯದು ಇರದೆಂಬಷ್ಟು ಕೆಟ್ಟದಾದುದು ಯಾವುದೂ ಇಲ್ಲ ಮತ್ತು ಅದಕ್ಕೆ ಪ್ರತಿಯಾಗಿಯೂ ಹಾಗೆಯೇ ಒಂದು ಅಲ್ಲಿದ್ದರೆ, ಇನ್ನೊಂದೂ ಅಲ್ಲಿ ಇರಲೇಬೇಕಾಗುತ್ತದೆ.

ಮಾರ್ಚ್ 3ರ ಶನಿವಾರ, ಗುರುಗಳು ಬೋಸ್ಟನ್‌ನ ಯುವಕನೊಬ್ಬನನ್ನು ಪ್ರಶಿಕ್ಷಕನಾಗಿ ತಯಾರಿಸುತ್ತಿದ್ದರು. ಗುರುಗಳು ಆತನಿಗೆ, "ನಿನ್ನನ್ನು ಪ್ರಶಿಕ್ಷಕನನ್ನಾಗಿ ಮಾಡುವ ಮೊದಲು ನಾನು ನಿನ್ನನ್ನು ಎಚ್ಚರಿಸಬಯಸುತ್ತೇನೆ. ನಿನ್ನ ಅತ್ಯುತ್ಸಾಹದಲ್ಲಿ ಯುಕ್ತಾಯುಕ್ತ ವಿವೇಚನೆಯಿಲ್ಲದೆ ನೀನು ಸಹಜಮಾರ್ಗದೊಳಕ್ಕೆ ಪ್ರತಿಯೊಬ್ಬರನ್ನೂ ತರಬಾರದು. ಒಬ್ಬ ಮಾದಕದ್ರವ್ಯ ವ್ಯಸನಿಯಿರುವನೆಂದಿಟ್ಟುಕೋ. ಬೈಠಕ್‌ಗಳನ್ನು ಕೊಟ್ಟು ಅವನಿಗೆ ನಾನು ಸಹಾಯಮಾಡುವೆ ಎಂದುಕೊಳ್ಳಬೇಡ. ಕನಿಕರಿಸುವುದು ನಿನಗೆ ಸಲ್ಲ, (ಬಾಬೂಜಿಯವರ ಭಾವಚಿತ್ರವನ್ನು ತೋರಿಸುತ್ತ) ಕನಿಕರಿಸುವುದು ಅವರಿಗೆ ಬಿಟ್ಟದ್ದು." ಎಂದರು.

## ಇರಾನೀಯರ ವಿಚಾರಸಂಕಿರಣ

ಮಾರ್ಚ್ 5ರ ಸೋಮವಾರ, ಇರಾನೀಯರ ವಿಚಾರಸಂಕಿರಣ ಆರಂಭವಾಯಿತು. 6ರಂದು ಗುರುಗಳು ಡಾರ್ಮಿಟರಿ Aಯಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು. ತದನಂತರ ಗುರುಗಳು ತನಗೆ ಮೈ ಹುಷಾರಿಲ್ಲದ ಕಾರಣ ಭಾಷಣಕೊಡಲಾಗುವುದಿಲ್ಲವೆಂದು ಹೇಳಿದರು. ಆಗ ಕೆಲ ಇರಾನಿ ಅಭ್ಯಾಸಿಗಳು ಗುರುಗಳಿಗೆ ಉಡುಗೊರೆಗಳನ್ನು ಕೊಡಲಾರಂಭಿಸಿದರು, ಗುರುಗಳ ಮನ ಕರಗಿದಂತೆ ಕಾಣಿಸಿತು. ಒಡನೆಯೇ ಗುರುಗಳು ತನ್ನ ಯೋಜನೆಯನ್ನು ಬದಲಿಸಿ ಭಾಷಣವನ್ನು ಕೊಡುವರೆಂದು ಯಾರಿಗಾದರೂ ಅನಿಸುತ್ತಿತ್ತು. ಅನೇಕರಿಗೆ ಕಣ್ಣುತುಂಬಿ ಬಂತು. ಗುರುಗಳ ಧ್ವನಿಯೂ ಅತೀವವಾಗಿ ಮೃದುವಾಗಿತ್ತು. ವಿಶೇಷವಾದುದೇನೋ ಪ್ರವಹಿಸುತ್ತಿತ್ತು. ಗುರುಗಳೆಂದರು, "ನನಗೆ ಮೈ ಚೆನ್ನಾಗಿಲ್ಲದ ಕಾರಣ ನಾನು ಮಾತನಾಡುತ್ತಿದ್ದಿಲ್ಲ, ಆದರೆ ನಿಮ್ಮ ಗಾಢ ಪ್ರೇಮವು ನನ್ನನ್ನು ಮಾತನಾಡುವಂತೆ ಮಾಡಿದೆ." ಬಹುತೇಕ, ಕೋಣೆಯಲ್ಲಿದ್ದ ಪ್ರತಿಯೊಬ್ಬರೂ ಅಳುತ್ತಿದ್ದರು. ಗುರುಗಳೆಂದರು, "ಹೀಗೆ ಯಾರಾದರೂ ಅಳುವಾಗ, ಅದು ಅವರ ಹೃದಯ ಮೃದುವಾಗುತ್ತಿರುವುದರ ಸಂಕೇತ. ಮತ್ತು ಅಂಥ ಸಂದರ್ಭದಲ್ಲಿ ಬೇರೆಯವರು ಹೋಗಿ ಅವರನ್ನು ಸಮಾಧಾನ ಪಡಿಸುವುದು ಅಥವಾ ಅಳಬೇಡವೆಂದು ಹೇಳುವುದು ಸರಿಯಲ್ಲ." ಸಹಜಮಾರ್ಗ ಅಭ್ಯಾಸವಿಡೀ ಹೃದಯವನ್ನು ಮೃದುಗೊಳಿಸುವುದರಲ್ಲಿ ಪರಿಣಮಿಸಬೇಕು. ಆರಂಭಿಕ ವರ್ಷಗಳಲ್ಲಿ ಅದು ಕಣ್ಣೀರನ್ನು ಉಂಟುಮಾಡುತ್ತದೆ, ಆದರೆ ಆನಂತರ ಕಣ್ಣೀರಿಲ್ಲದೆ ಅದು ಮತ್ತೂ ಮುಂದುವರಿಯಬೇಕು; ಹೃದಯದ ಮೃದುವಾಗುವಿಕೆ ಎಂದೂ ನಿಲ್ಲಬಾರದು." ಈ ಸಭೆಯ ನಂತರ ಗುರುಗಳು ಗಾಯತ್ರಿಗೆ ತೆರಳಿದರು. ಮಾರ್ಚ್ 9ರ ಶುಕ್ರವಾರ ಗುರುಗಳು ಇರಾನಿ ಅಭ್ಯಾಸಿಗಳನ್ನು ಮಧ್ಯಾಹ್ನದೂಟಕ್ಕೆ ಗಾಯತ್ರಿಗೆ ಆಹ್ವಾನಿಸಿದರು.

ಮಾರ್ಚ್ 10ರ ಶನಿವಾರ ಪೂರ್ವಾಹ್ನ ಸುಮಾರು 8.45 ಕ್ಕೆ ಗುರುಗಳು ಆಶ್ರಮಕ್ಕೆ ಬಂದರು. ಡಾರ್ಮಿಟರಿ A ಯಲ್ಲಿ ಸತ್ಸಂಗಾನಂತರ ಗುರುಗಳೆಂದರು, "ಮೊದಲಿಗೆ ನಾನು ಭಾಷಣ ಕೊಡುವುದನ್ನು ಮಾತ್ರ ಯೋಜಿಸುತ್ತಿದ್ದೆ ಆದರೆ ಈ ಇರಾನಿ ಮಹಿಳೆ ಇಲ್ಲಿ ಧ್ಯಾನವನ್ನು ಆರಂಭಿಸಲು ಬಯಸಿದಳು, ಮತ್ತು ನಾನು ಎಲ್ಲರಿಗೂ ಬೈಠಕ್ ಕೊಟ್ಟೆ. ನೋಡಿ, ನಾವು ಹೇಗೆ ಯೋಜನೆಗಳನ್ನು ಮಾಡುತ್ತೇವೆ ಮತ್ತು ಅದು ಹೇಗೆ ಬದಲಾಗುತ್ತದೆ. ನಾವು ಪಾಶ್ಚಿಮಾತ್ಯರ ಹಾಗೆ ಅತಿಯಾಗಿ ಯೋಜಿಸಬಾರದು ಬದಲಾಗಿ ಪ್ರವಾಹದೊಂದಿಗೆ ಹೋಗಲು ಸಿದ್ಧರಿರಬೇಕು." ನಂತರ ಅವರು ನದಿಯ ಬಗ್ಗೆ ಮಾತನಾಡುತ್ತ, ಅದು ಹೇಗೆ ತಾನು ಹೋಗುತ್ತ ತನ್ನ ದಾರಿಯನ್ನು ಮಾಡಿಕೊಳ್ಳುತ್ತ ಮುಂದ-ಮುಂದಕ್ಕೆ ಹರಿಯುತ್ತಿರುತ್ತದೆ, ಹಾಗೆ ನಮ್ಮ ಜೀವನ ಇರಬೇಕು. ನಾವು ತುತ್ತತುದಿಯಿಂದ, ಪ್ರೇಮ, ಶ್ರದ್ಧೆ ಮುಂತಾದ ಉನ್ನತ ಆದರ್ಶಗಳಿಂದ ಪ್ರಾರಂಭಿಸಬೇಕು ಮತ್ತು ನಂತರ ಅದನ್ನು, ನಿಮ್ನತಮ ಮಟ್ಟಗಳಿಗೆ, ಪ್ರತಿಯೊಬ್ಬರನ್ನೂ ತಲಪುವಂತೆ, ಆದರ್ಶಗಳನ್ನು ಬಿಟ್ಟುಗೊಡದೆ, ಕೆಳಗಡೆ ಹರಿಯಗೊಡಬೇಕು ಎಂದರು.

ಸಾಯಂಕಾಲ, ಗುರುಗಳು ಕೇರಳದ ವಲಯಮಟ್ಟದ ಆಶ್ರಮದ ಕುರಿತಾದ ದೃಶ್ಯಮುದ್ರಿಕೆ (ವೀಡಿಯೊ)ಯೊಂದನ್ನು ನೋಡಿದರು ಮತ್ತು ಆಶ್ರಮವು ಅದೇ ಗಳಿಗೆಯಲ್ಲಿ ಉದ್ಘಾಟಿತವಾಗಿದ್ದು ಅಭ್ಯಾಸಿಗಳು ಅದನ್ನು ಬಳಸಲು ಪ್ರಾರಂಭಿಸಬಹುದೆಂದರು.

## ಮುಕ್ತಿಯ ಬಗೆಗೆ

ಮಾರ್ಚ್ 11ರ ರವಿವಾರ, ಬೆಳಗಿನ ಸತ್ಸಂಗಾನಂತರ ತನ್ನ ಮಲಗುವಕೋಣೆಯಲ್ಲಿ ಮಾತನಾಡುತ್ತ ಗುರುಗಳು, ಮಕ್ಕಳಿಗೆ ಹೇಗೆ ಪ್ರತಿಯೊಂದು ಅನುಭವವೂ ಹೊಸದಾಗಿ ವಿಸ್ಮಯದಿಂದ ಕೂಡಿರುತ್ತದೆ ಎನ್ನುತ್ತ, "ಅನೇಕ ವರ್ಷಗಳನ್ನು ವ್ಯರ್ಥಗೊಳಿಸಿದ ಬಳಿಕ ನಾನು ನಾನಾಗಿರಲು ಕಲಿಯುತ್ತಿದ್ದೇನೆ" ಎಂದರು. "ಇಲ್ಲ, ನಾನು ಹಾಸ್ಯ ಮಾಡುತ್ತಿಲ್ಲ. ಅಧ್ಯಾತ್ಮ ನನಗೆ ನಾನಾಗಿರಲು ಕಲಿಸಿದೆ. ನಾನು ನಾನಾಗಿರದೆ ಪ್ರಗತಿ ಹೊಂದಲಾರೆ ಎಂಬುದನ್ನು ಅಧ್ಯಾತ್ಮ ನನಗೆ ಕಲಿಸಿದೆ" ಎಂದು ಸೇರಿಸಿದರು. ನಂತರ ಮುಕ್ತಿಯ ಕಡೆಗೆ ವಿಷಯಪಲ್ಲಟವಾಯಿತು. ಗುರುಗಳು ತಾನು ಹೇಗೆ ತನ್ನನ್ನು ಅಭ್ಯಾಸಿಗಳಿಂದ ಬಿಡುಗಡೆಗೊಳಿಸಿಕೊಂಡೆ, ಮಿಷನ್‌ನಿಂದ ಹೇಗೆ ತನ್ನನ್ನು ಬಿಡುಗಡೆಗೊಳಿಸಿಕೊಂಡೆ ಮತ್ತು ಉತ್ತರಾಧಿಕಾರಿಯಿಂದ ಹೇಗೆ ತನ್ನನ್ನು ಬಿಡುಗಡೆಗೊಳಿಸಿಕೊಂಡೆ ಎಂಬುದರ ಬಗ್ಗೆ ಹೇಳಿದರು. ಅವರೆಂದರು, "ನನ್ನ ಅಭ್ಯಾಸಿಗಳಿಗೆ ನಾನು ಜವಾಬ್ದಾರ ಎಂದುಕೊಂಡಿದ್ದೆ. ಆದ್ದರಿಂದಲೇ ನಾನು, ನನ್ನ ಅಭ್ಯಾಸಿಗಳಿಗಾಗಿ, ಸಾಂಕೇತಿಕವಾಗಿ ಹೇಳುವುದಾದರೆ 'ನನ್ನನ್ನೇ ಕೊಂದುಕೊಳ್ಳು'ತ್ತಿದ್ದೆ. ಆದರೆ ಒಂದು ಹಂತದಲ್ಲಿ, ನಾನು ಏನನ್ನು ಉತ್ಪಾದಿಸಬಲ್ಲೆ ಎಂಬುದನ್ನಲ್ಲ, ಬದಲಾಗಿ, ನನ್ನ ಕೆಲಸದ ಮೂಲಕ ನಾನು ಏನು ಆಗಬಲ್ಲೆ ಎಂಬುದನ್ನು ನನ್ನ ಗುರುದೇವನಿಗೆ ತೋರಿಸುವುದು ನನ್ನ ಜವಾಬ್ದಾರಿ ಎಂದು ನನಗನಿಸಿತು. ಮತ್ತು ಅದು ನನ್ನನ್ನು ನನ್ನ ಅಭ್ಯಾಸಿಗಳಿಂದ ಬಿಡುಗಡೆಗೊಳಿಸಿತು. ಆಗ ನನ್ನ ಉತ್ತರಾಧಿಕಾರಿಯ ಸಮಸ್ಯೆ ಎದುರಾಯಿತು, ನಾನು ಚಿಂತೆಗೊಳಗಾಗುತ್ತಿದ್ದೆ, ನನ್ನ ನಂತರ ಏನಾಗಬಹುದು? ಒಂದುದಿನ, ನಾನು ಅದನ್ನು ಮುಗಿಸಿಬಿಟ್ಟೆ. ನಾನು ಒಪ್ಪಿಸಿಬಿಟ್ಟಿದ್ದೇನೆ, ಆತ ಹೊಣೆಯನ್ನು ವಹಿಸಿಕೊಳ್ಳಬೇಕಾಗಿದೆ ಮತ್ತು ಅದು ಆತನ ಸಮಸ್ಯೆ, ನಾನು ಅದರಿಂದ ಬಿಡುಗಡೆಗೊಂಡಿದ್ದೇನೆ."

ಮಾರ್ಚ್ 17ರ ಶನಿವಾರ, ಬೆಳಗಿನ ಉಪಾಹಾರದ ನಂತರ, ಗುರುಗಳು ಚಿತ್ತೂರಿನಿಂದ ಬಂದ ಸುಮಾರು 500 ಮಂದಿ ಅಭ್ಯಾಸಿಗಳನ್ನು ಭೇಟಿಯಾಗಲು ಡಾರ್ಮಿಟರಿ Aಗೆ ನಡೆದರು. ಮಾರ್ಚ್ 28ರ ರವಿವಾರ ಗುರುಗಳು ಸತ್ಸಂಗ ನಡೆಸಿಕೊಟ್ಟರು ಮತ್ತು ಆನಂತರ ಅವರು ವಿಲ್ಲುಪುರಂನಿಂದ ಬಂದ ಅಭ್ಯಾಸಿಗಳ ಗುಂಪೊಂದನ್ನು ಭೇಟಿಯಾದರು. ಅವರು, 7 ಎಕರೆ ಸ್ಥಳವನ್ನು ಖರೀದಿಸಿ, ಆಶ್ರಮಕ್ಕೆ ಒಂದು ಭಾಗವನ್ನು ಇರಿಸಿ, ಉಳಿದುದನ್ನು ಅಭ್ಯಾಸಿಗಳ ವಸತಿಪ್ರದೇಶವನ್ನಾಗಿ ಮಾಡುವ ಪ್ರಸ್ತಾಪವನ್ನು ಗುರುಗಳ ಮುಂದಿಟ್ಟರು. ಗುರುಗಳು 'ಸ್ಟಾರ್ ವಾರ್ಸ್' ಚಲನಚಿತ್ರವನ್ನು ನೋಡಿದರು ಮತ್ತು ಯೋಡಾನ ಸಂಭಾಷಣೆಗಳಲ್ಲೊಂದಾದ, "ಭಯವು ಅಂಧಕಾರದ ಕಡೆಗೆ ಕರೆದೊಯ್ಯುತ್ತದೆ ಏಕೆಂದರೆ ಭಯವು ಕ್ರೋಧದೆಡೆಗೆ ಒಯ್ಯುತ್ತದೆ, ಕ್ರೋಧವು ದ್ವೇಷದೆಡೆಗೆ ಒಯ್ಯುತ್ತದೆ, ದ್ವೇಷವು ದುಃಖದೆಡೆಗೆ ಒಯ್ಯುತ್ತದೆ, ದುಃಖವು ಅಂಧಕಾರದೆಡೆಗೆ ಒಯ್ಯುತ್ತದೆ." ಎಂಬುದನ್ನು ತಾನು ಮೆಚ್ಚಿರುವುದಾಗಿ ಹೇಳಿದರು. ಸಾಯಂಕಾಲ, ಗುಜರಾತಿನಿಂದ ಬಂದ ಅಭ್ಯಾಸಿಗಳ ಗುಂಪೊಂದು ಕಾಟೇಜ್‌ನಲ್ಲಿ ಒಟ್ಟುಸೇರಿತ್ತು. ಗುರುಗಳು ತನ್ನ ಉಸಿರಾಟದ ವ್ಯಾಯಾಮಗಳನ್ನು ತಪ್ಪಿಸಿ ಅವರಿಗೆ ಒಂದು ಬೈಠಕ್ ನೀಡಲು ಬಂದರು. ಪ್ರತಿಯೊಬ್ಬರನ್ನೂ ತಾಳ್ಮೆಯಿಂದ ಭೇಟಿಯಾಗಿ ಅವರ ಕೋರಿಕೆಗಳನ್ನು ಮನ್ನಿಸಿದರು.

ಮಾರ್ಚ್ 21ರ ಬುಧವಾರ, ಗುರುಗಳು ಮಾವಿನ ತೋಪಿನಲ್ಲಿ

ಮಾವಿನಗಿಡವೊಂದನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸ್ಥಳಾಂತರಿಸಲು ಯೋಜಿಸಿಕೊಂಡಿದ್ದರು. ಗಿಡಕ್ಕೆ ಯಾವುದೇ ಹಾನಿಯಾಗದಂತೆ ಎಲ್ಲ ಮುಂಜಾಗ್ರತೆಗಳನ್ನು ಕೈಗೊಳ್ಳುವುದನ್ನು ಅವರು ಸ್ವತಃ ನಿಶ್ಚಿತಪಡಿಸಿಕೊಂಡಿದ್ದರು. ಮಾರ್ಚ್ 25 ರಂದು ಗುರುಗಳು, ಒಮೇಗಾ ಶಾಲೆಯಿಂದ ಉತ್ತೀರ್ಣರಾಗುತ್ತಿರುವ 11ನೇ ತರಗತಿಯ ಸುಮಾರು ನೂರು ಮಂದಿ ವಿದ್ಯಾರ್ಥಿಗಳನ್ನು ಭೇಟಿಯಾದರು. ಅವರನ್ನುದ್ದೇಶಿಸಿ ಮಾತನಾಡಿದರು, ಅವರೊಂದಿಗೆ ಅಲ್ಪಾಹಾರವನ್ನು ಸೇವಿಸಿದರು ಮತ್ತು ಅವರೊಂದಿಗೆ



ಛಾಯಾಚಿತ್ರವೊಂದಕ್ಕೆ ಭಂಗಿ ನೀಡಿದರು. ಮರುದಿನ ಗುರುಗಳು ಗಾಯತ್ರಿಗೆ ತೆರಳಿದರು ಮತ್ತು ಶನಿವಾರದಂದು ಆಶ್ರಮಕ್ಕೆ ಮರಳಿಬರುವ ಹಾಗೆ, ಒಂದುವಾರ ಅಲ್ಲಿದ್ದರು.



## "ಪ್ರತಿಯೊಂದು ಸತ್ಸಂಗವೂ ವೈಯಕ್ತಿಕ ಬೈಠಕ್‌ನಂತಿರಬೇಕು"

ಏಪ್ರಿಲ್ 1ರ ರವಿವಾರ, ಗುರುಗಳ ತಲ್ಲೀನತೆಯು ಸತ್ಸಂಗವೊಂದನ್ನು ನಡೆಸಿಕೊಟ್ಟರು. ಧ್ಯಾನಮಂದಿರದಿಂದ ಹೊರಬಂದ ಅವರು ಗಾಲ್ಫ್ ಗಾಡಿಯಲ್ಲಿ ಕುಳಿತರು ಮತ್ತು ದೀರ್ಘ ತಂತಿಯುಳ್ಳ ಧ್ವನಿವರ್ಧಕವೊಂದನ್ನು ತರಿಸಿ "ಸಾಮೂಹಿಕ ಬೈಠಕ್‌ಗಳನ್ನು ನೀಡುವ ಕಲೆ"ಯ ಬಗ್ಗೆ ಒಂದು ಕಿರುಭಾಷಣವನ್ನಿತ್ತರು. ಬೈಠಕನ್ನು ನೀಡುತ್ತಿರುವಾಗ, ಪ್ರತಿಯೊಬ್ಬ ಅಭ್ಯಾಸಿಗೂ ವೈಯಕ್ತಿಕ ಬೈಠಕ್‌ನಂತೆ ಅನಿಸುವ ಹಾಗೆ ಸತ್ಸಂಗಗಳನ್ನು ನಡೆಸಿಕೊಡಲು ಪ್ರಶಿಕ್ಷಕರು ಕಲಿಯಬೇಕು ಎಂಬ ವಿಚಾರ ತನ್ನಲ್ಲಿ ಬಂತು ಎಂದರು. ಸೋ. ಕಮಲೇಶ್ ಪಟೇಲ್ ಇದನ್ನು ಮಾಡಬೇಕಾಗುವುದು ಮತ್ತು ಇನ್ನು ಮುಂದೆ ಅವರು ರವಿವಾರದ ಸತ್ಸಂಗಗಳನ್ನು ನಡೆಸಿಕೊಡುವರು ಎಂದರು. ಮುಂದುವರಿದು, "ಖಂಡಿತ, ನಾನು ಇಲ್ಲಿದ್ದೇನೆ. ಬೈಠಕ್ ಗಳನ್ನು ಕೊಡಲೂ ಕೆಲಕಾಲ ನಾನು ಇಲ್ಲಿರುವೆ. ಆದರೆ ಅದು ರವಿವಾರ ಆಗಿರದೆ ಇರಬಹುದು; ವಾರದ ಬೇರೆ ದಿನವೂ ಇರಬಹುದು. ಆದ್ದರಿಂದ ಸಿದ್ಧರಾಗಿರಿ!" ಇದನ್ನು ಅವರು ಶುದ್ಧ ತಮಿಳಿನಲ್ಲಿ ಪುನರುಚ್ಚರಿಸಿ ನಂತರ ಹೊರಟರು.

ಅನೌಪಚಾರಿಕ ಮಾತುಕತೆಯೊಂದರಲ್ಲಿ ಸೋದರಿಯೊಬ್ಬರು, ಧ್ಯಾನ ಮಾಡುತ್ತಿರುವ ವ್ಯಕ್ತಿಯೋರ್ವನಲ್ಲಿ ಆಂತರಿಕ ಸೌಂದರ್ಯವು ಹೇಗೆ ದೃಗ್ಗೋಚರವಾಗುತ್ತದೆ ಎಂಬುದರ ಬಗ್ಗೆ ಹೇಳಿದರು. ಗುರುಗಳು ಸ್ಪಷ್ಟೀಕರಿಸುತ್ತ, ವ್ಯಕ್ತಿಯು ಧ್ಯಾನ ಮಾಡುವಾಗ ಹೆಚ್ಚು ಸುಂದರನಾಗುತ್ತಾನೆ ಎಂದಲ್ಲ, ಅದು ಅವರ ಆಂತರಿಕ ದೈವತ್ವವು ದೃಗ್ಗೋಚರವಾಗುವುದು ಮತ್ತು ಬೆಳಗಲಾರಂಭಿಸುವುದು. ಬರೇ ಒಂದು ಬೈಠಕ್‌ನ ನಂತರ, ಒಬ್ಬ ವ್ಯಕ್ತಿ ಸಂಪೂರ್ಣ ಬೇರೆಯೇ ಆಗಿ ಕಾಣಿಸಿದಾಗ ಇಂಥ ದೃಗ್ಗೋಚರ ಬದಲಾವಣೆಯನ್ನು ತಾನು ಕಂಡಿರುವುದಾಗಿ ಅವರು ಹೇಳಿದರು.

## "ಸ್ಮರಣೆಯು ಗುರುಗಳನ್ನು ಆಕರ್ಷಿಸುತ್ತದೆ"

ಏಪ್ರಿಲ್ 2ರ ಸೋಮವಾರದಂದು, ಕಾನ್ಪುರದಿಂದ ಬಂದ ಸುಮಾರು 650 ಅಭ್ಯಾಸಿಗಳಿಗಾಗಿ ಒಂದುವಾರದ ವಿಚಾರಸಂಕಿರಣವೊಂದು ಆರಂಭವಾಯಿತು.



ಗುರುಗಳು ಡಾರ್ಮಿಟರಿ Aಗೆ ಹೋಗಿ ಸತ್ಸಂಗವನ್ನು ನಡೆಸಿಕೊಟ್ಟರು. ಗುರುಗಳನ್ನು ಭೇಟಿಯಾದ ಕೆಲ ಇರಾನಿ ಅಭ್ಯಾಸಿಗಳು ಅಲ್ಲಿದ್ದರು. ಒಬ್ಬ ಅಭ್ಯಾಸಿ, "ಒಮ್ಮೆ ನಾವು ಹಿಂದಕ್ಕೆ ಹೋದೆವೆಂದರೆ, ಗುರುಗಳ ಗಮನ ನಮ್ಮ ಮೇಲೆ ಇರುವುದನ್ನು ಮುಂದುವರಿಸುವುದು ಹೇಗೆ?" ಎಂದು ಕೇಳಿದರು. ಗುರುಗಳು, "ಒಂದು ಗುಲಾಬಿ ಆಕರ್ಷಿಸುವುದು ಹೇಗೆ ತನ್ನ ಸೌಂದರ್ಯ ಮತ್ತು ಪರಿಮಳದಿಂದ; ಮಗುವೊಂದು ತನ್ನ ತಾಯನ್ನು ಆಕರ್ಷಿಸುವುದು ಹೇಗೆ – ಪ್ರೀತಿಯಿಂದ; ಅಭ್ಯಾಸಿಯೊಬ್ಬ ತನ್ನ ಗುರುವನ್ನು ಆಕರ್ಷಿಸುವುದು ಹೇಗೆ– ತನ್ನ ಅವಸ್ಥೆಯಿಂದ." ಎಂದುತ್ತರಿಸಿದರು. ಮತ್ತೆ, "ಗುರುವನ್ನು ನಮ್ಮೊಂದಿಗೆ ಇರಿಸುವಂತೆ ನಮ್ಮ ಆಧ್ಯಾತ್ಮಿಕ ಅವಸ್ಥೆಯು ಇರಬೇಕು. ಮತ್ತು ಇದನ್ನು ಮಾಡುವ ವಿಧಾನವೆಂದರೆ, ಧ್ಯಾನವನ್ನು ಸರಿಯಾಗಿ ಮಾಡುವುದು ಮತ್ತು ಅನಂತರ ನಿರಂತರ ಸ್ಮರಣೆಯು ಧ್ಯಾನಕ್ಕಿಂತ ಮೇಲೆಂಬುದನ್ನು ತಿಳಿದುಕೊಂಡು ನಿರಂತರ ಸ್ಮರಣೆಯನ್ನು ಅಭ್ಯಾಸ ಮಾಡುವುದು ಇತ್ಯಾದಿ." ಎಂದರು. ಆ ಅಭ್ಯಾಸಿ ಮತ್ತೆ, "ನಿರಂತರ ಸ್ಮರಣೆಯನ್ನು ಮೀರಿದ ಮುಂದಿನ ಮಟ್ಟ ಯಾವುದು?" ಎಂದು ಕೇಳಿದರು. ಗುರುಗಳು, "ನೀವು ಆ ಸ್ಥಿತಿಗೆ ಬಂದಾಗ, ನಾನು ಹೇಳುವೆ." ಎಂದರು.

ಇನ್ನೊಂದು ಸಂದರ್ಭದಲ್ಲಿ ಸೋದರಿಯೊಬ್ಬರು, ಸಂಗೀತವು ತನ್ನ ವೃತ್ತಿಯಾಗಿದೆ ಆದರೆ ಈ ದಿನಗಳಲ್ಲಿ ಗುರುಗಳು ಆಕೆಯ ಹೃದಯವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಿರುವಂತೆ ಅನಿಸಿದ್ದು ಆಕೆಗೆ ತನ್ನ ಹೃದಯವನ್ನು ಸಂಗೀತದಲ್ಲಿರಿಸಿ ನುಡಿಸಲು ಸಾಧ್ಯವಾಗುತ್ತಿಲ್ಲವೆಂದು ಹೇಳಿದರು. ತಾನು ತನ್ನ ವೃತ್ತಿಯನ್ನು ಬದಲಾಯಿಸಬೇಕೆ? ಎಂದು ಕೇಳಿದರು. ಗುರುಗಳು, "ಅದು ಅಗತ್ಯವಿಲ್ಲ. ಬದಲಾಗಿ ನಿನ್ನೊಳಗೆ ಕೊಳಲು ನುಡಿಸುತ್ತಿರುವುದು ಗುರುವೇ ಎಂದು ಭಾವಿಸಿಕೊಂಡು ನಂತರ ನಿನ್ನ ಸಂಗೀತ ವಾದ್ಯವನ್ನು ನುಡಿಸು." ಎಂದು ಹೇಳಿದರು.

ಏಪ್ರಿಲ್ 6ರ ಶುಕ್ರವಾರದಂದು ಸೋ. ಕೃಷ್ಣ ಭಾಷಣವೊಂದನ್ನು ಮಾಡಿದರು. ಗುರುಗಳು ಕುಟೀರದಿಂದ CCTV ಮೂಲಕ ಅದನ್ನು ಆಲಿಸಿದರು. ಭಾಷಣದ ತರುವಾಯ, ಗುರುಗಳು ಡಾರ್ಮಿಟರಿ Aಗೆ ಹೋಗಿ ಒಂದು ಬೈಠಕ್ ನೀಡಲು ನಿರ್ಧರಿಸಿದರು. ಅನಂತರ ಅವರು ಕೇಂದ್ರ ಸಂಚಾಲಕರಿಗೆ, ತನ್ನ ಕಾರ್ಯವಿನ್ನೂ ಮುಗಿದಿಲ್ಲ, ಮರುದಿನ ತಾನು ಇನ್ನೊಂದು ಬೈಠಕ್ ಕೊಡಲು ಇಚ್ಛಿಸುವೆನೆಂಬ ಸೂಚನೆಯನ್ನು ನೀಡಿದರು. ಏಪ್ರಿಲ್ 7ರಂದು ಗುರುಗಳು




ಹಿಂದಿಯಲ್ಲಿ ಭಾಷಣವೊಂದನ್ನಿತ್ತರು ತದನಂತರ ಒಂದು ಬೈಠಕನ್ನು ನೀಡಿದರು. ಅವರು, ತಾನು ಕಾನ್ಪುರಕ್ಕೆ ಹೋಗಿರುತ್ತಿದ್ದರೆ, ಅವರನ್ನು ಬರೇ ಒಂದು ಅಥವಾ ಎರಡು ದಿನಗಳ ಕಾಲ ಭೇಟಿಯಾಗಬಹುದಿತ್ತು, ಈಗ ಅವರು ಬಂದಿರುವುದರಿಂದ ಅವರನ್ನು ಒಂದು ವಾರವಿಡೀ ಭೇಟಿಯಾಗಲು ತನಗೆ ಸಾಧ್ಯವಾಗಿದೆ ಎಂದರು. ಅನೇಕ ಅಭ್ಯಾಸಿಗಳು ಆ ಒಂದು ವಾರದಲ್ಲಿ ಸಂಪೂರ್ಣ ಪರಿವರ್ತನೆಯನ್ನು ಅನುಭವಿಸಿದರು ಮತ್ತು ಮೊದಲನೆ ಬೈಠಕ್‌ನಿಂದ ಮತ್ತು ಕೊನೆಯ ಬೈಠಕ್‌ನ ವರೆಗೆ ವ್ಯತ್ಯಾಸವನ್ನು ಕಾಣಲು ಶಕ್ತರಾಗಿದ್ದರು.

ಎಪ್ರಿಲ್ 8ರ ರವಿವಾರದಂದು, ಗುರುಗಳ ಪ್ರಕಟಣೆಯ ನಂತರ ಮೊದಲ ಬಾರಿ ಸೋ. ಕಮಲೇಶ್ ರವರು ರವಿವಾರದ ಸತ್ಸಂಗವನ್ನು ನಡೆಸಿಕೊಟ್ಟರು. ಸಾಯಂಕಾಲ ಗುರುಗಳು, ಬಂದಿದ್ದ ಕೆಲ ಅಭ್ಯಾಸಿಗಳೊಂದಿಗೆ ಸ್ವಾರಸ್ಯಕರ ವಿಚಾರವಿನಿಮಯವನ್ನು ನಡೆಸಿದ್ದರು. ಆಮೇಲೆ, ಎಲ್ಲರಿಗೂ ಒಂದು ಬೈಠಕ್ ಕೊಡಲು ಗುರುಗಳು ನಿರ್ಧರಿಸಿದರು. ಸಹಜಮಾರ್ಗ ಅಭ್ಯಾಸವನ್ನು ಪ್ರಾರಂಭಿಸಲು ಬಯಸಿದ್ದ 17–18 ವಯಸ್ಸಿನ 5–6 ಮಂದಿ ಯುವಕರ ಗುಂಪೊಂದು ಗುರುಗಳ ಅನುಮತಿಯನ್ನು ಕೋರಿದಾಗ ಒಪ್ಪಿದ ಗುರುಗಳು ಅವರನ್ನೂ ಬೈಠಕ್‌ನಲ್ಲಿ ಸೇರಿಸಿಕೊಂಡರು.

### ಗುರುಗಳ ಬಗ್ಗೆ ಸಂವೇದನೆಯನ್ನು ಬೆಳೆಸಿಕೊಳ್ಳುವುದು

ಇತ್ತೀಚೆಗೆ, ಗುರುಗಳ ಭೌತಿಕ ಅನುಪಸ್ಥಿತಿಯಲ್ಲಿ ಅವರ ಆಧ್ಯಾತ್ಮಿಕ ಸಾನ್ನಿಧ್ಯವನ್ನು ಅಭ್ಯಾಸಿಗಳು ಅನುಭವಿಸುವಂತೆ ಮಾಡುವಲ್ಲಿ ಮತ್ತು ಅದನ್ನು ಗುರುಗಳ ಆರೋಗ್ಯ ಅವಕಾಶಕೊಟ್ಟರೆ ಅವರನ್ನು ಖುದ್ದಾಗಿ ಭೇಟಿಯಾಗುವ ಅಭ್ಯಾಸಿಗಳ ಹಂಬಲವನ್ನು ಸಮದೂಗಿಸುವಲ್ಲಿ ಗುರುಗಳ ಕಾಳಜಿಯನ್ನು ನಾವು ಗಮನಿಸಬಹುದು. ನೇಮಕಗೊಂಡ ಸ್ವಯಂಸೇವಕರು, ಬಿಡಿಯಾಗಿ ಮತ್ತು ಗುಂಪಿನಲ್ಲಿ ಬರುವ ಅಭ್ಯಾಸಿಗಳ ಆಶಯಗಳನ್ನು ಗುರುಗಳಿಗೆ ನಿವೇದಿಸುವ ಮತ್ತು ಅವರಿಗೆ ಗುರುಗಳೊಡನೆ ಭೇಟಿಯನ್ನು ಏರ್ಪಡಿಸುವಲ್ಲಿ ಉತ್ತಮ ಕೆಲಸವನ್ನು ಮಾಡುತ್ತಿದ್ದಾರೆ. ನಿಜವಾದ ಆವಶ್ಯಕತೆ ಇರುವಾಗ ಅಂಥ ಭೇಟಿಗಳು ಏರ್ಪಡುತ್ತವೆ ಮತ್ತು ಉಳಿದೆಲ್ಲ ಸಂದರ್ಭಗಳಲ್ಲಿ ಅಭ್ಯಾಸಿಗಳು ತನ್ನ ಮನಸ್ಸು ಮತ್ತು ಆರೋಗ್ಯದ ಮೇಲೆ

## ಪೂಜ್ಯ ಬಾಬೂಜಿ ಮಹಾರಾಜರ ಜನ್ಮದಿನೋತ್ಸವ



ಪೂಜ್ಯ ಬಾಬೂಜಿ ಮಹಾರಾಜರ ಜನ್ಮದಿನೋತ್ಸವವನ್ನು ದೇಶದಾದ್ಯಂತ ಎಲ್ಲಾ ಕೇಂದ್ರಗಳಲ್ಲಿ ಪೂಜ್ಯಮನೋಭಾವ, ಉತ್ಸಾಹ, ಸಂಭ್ರಮ ಹಾಗು ಭಕ್ತಿಯಿಂದ ಆಚರಿಸಲಾಯಿತು. ಗುರುಗಳ ಆಣತಿಯಂತೆ, ಉತ್ಸವವನ್ನು ಎಲ್ಲಾ ಕೇಂದ್ರಗಳಲ್ಲಿ ಹಾಗೂ ಆಶ್ರಮಗಳಲ್ಲಿ ನಡೆಸಲಾಯಿತು. ಈ ಶುಭದಿನದಂದು ಅಭ್ಯಾಸಿಗಳೆಲ್ಲ ನಿರೀಕ್ಷಣೆ ಹಾಗೂ ತವಕದಿಂದ ಒಟ್ಟುಗೂಡಿದ್ದರು. ಅನೇಕ ಕಾರ್ಯಕ್ರಮಗಳನ್ನು ಯೋಜಿಸಲಾಗಿದ್ದು ಉತ್ಸವವು ಸರಾಗವಾಗಿ ನಡೆಯುವಂತೆ ಅನೇಕ ಅಭ್ಯಾಸಿಗಳು ಯೋಜನೆಗಳನ್ನು ಕಾರ್ಯಗತಗೊಳಿಸಲು ಅಪಾರ ಶ್ರಮವಹಿಸಿದರು.

ಚೆನ್ನೈಯಲ್ಲಿ ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟು ಈ ಸಂದರ್ಭದಲ್ಲಿ ಮಾತನಾಡಿದರು. ಅವರು ಮಹಾನ್ ವ್ಯಕ್ತಿಗಳನ್ನು ನೆನಪಿಸುವ ಇಂತಹ ಸಂದರ್ಭಗಳ ಆಚರಣೆಯ ಅಗತ್ಯದ ಕುರಿತು ಮಾತನಾಡಿದರು. ನೆನಪುಗಳು ನಮ್ಮನ್ನು ಗತಕ್ಕೊಯ್ಯಬಾರದು, ಬದಲಾಗಿ ಅವರು ವರ್ತಮಾನದಲ್ಲಿ, ಇಂದು, ನಮ್ಮೊಂದಿಗೆ ಇದ್ದಾರೆಂದು ತಿಳಿದುಕೊಳ್ಳಬೇಕು ಎಂದು ಅವರು ಹೇಳಿದರು. ಬಾಬೂಜಿಯವರನ್ನು ಪ್ರಸ್ತಾವಿಸುತ್ತಾ, ಅವರ ಜೀವನ, ಅದನ್ನು ನಡೆಸಿದ ರೀತಿ ಹಾಗೂ ಸರಳತೆಯನ್ನು ಸ್ಮರಿಸಿಕೊಳ್ಳಬೇಕು ಎಂದರು.

ಗುರುಗಳು 'ದಿವ್ಯಲೋಕದಿಂದ ಪಿಸುಮಾತುಗಳು' – ನಾಲ್ಕನೇ ಸಂಪುಟವನ್ನು ಬಿಡುಗಡೆಗೊಳಿಸಿದರು. ಪುಸ್ತಕಗಳಿಂದಾಯ್ದ ಸಂದೇಶ ವಾಚನಗಳಿರುವ 'ವ್ಹಿಸ್ಪರ್ಸ್' ಎಂಬ ಎಂ.ಪಿ.3 ಸಿ.ಡಿಯಿಂದ ಹಲವು ಸಂದೇಶಗಳನ್ನು ಕೇಳಿಸಲಾಯಿತು.

ವಿವಿಧ ಕೇಂದ್ರಗಳಲ್ಲಿ ನಡೆದ ಆಚರಣೆಗಳನ್ನು ಚಿತ್ರಮಂಜರಿಯ ಮೂಲಕ ಪ್ರಸ್ತುತಗೊಳಿಸುತ್ತಿದ್ದೇವೆ.



ಭಿಲ್ವಾರ



ಅಲುವಾ



ಅಜ್ಮೇರ್



ಅಲಿಗಢ



ಜೋಧ್‌ಪುರ್


ಡೆಹ್ರಾಡೂನ್


ದಾವಣಗೆರೆ


ಕೋಲಾರ


ಶ್ರೀಗಂಗಾನಗರ


ಬಿಕನೇರ್


ಮಧುರೈ


ಬೆಂಗಳೂರು


ಕಾಶಿಪುರ್


ರಾಮ್‌ಪುರ್


ಸಿದ್ದಿಪೇಟ್


ರಾಂಚಿ


ಗೋರಖ್‌ಪುರ್



ಮಿರ್ಜಾಪುರ್


ಉದಯಪುರ್


ಕಾನ್ಪುರ್


ವಾರಣಾಸಿ


ಪಯ್ಯನ್ನೂರ್


ನೋಯಿಡಾ

## ಭ್ರಾತೃತ್ವ ಬಲಗೊಳಿಸಲು ಯಾತ್ರೆ

### ವಾರಣಾಸಿ, ಉತ್ತರ ಪ್ರದೇಶ



ವಿಂಧ್ಯ ಪರ್ವತದ ಸಾಲಿನಲ್ಲಿರುವ ವಾರಣಾಸಿಯು, ಉತ್ತರಪ್ರದೇಶದ ಸೋನ್‌ಭದ್ರ ಜಿಲ್ಲೆಯಲ್ಲಿದೆ. ಮಾರ್ಚ್ 23 ರಂದು 30 ಅಭ್ಯಾಸಿಗಳ ಗುಂಪೊಂದು ಬಸ್ಸಿನಲ್ಲಿ ಸಂಚರಿಸಿ ತಮ್ಮ ಉಪಕೇಂದ್ರಗಳಿಗೆ ಭೇಟಿ ನೀಡಿ ಗುರುಗಳ ಸಂದೇಶವನ್ನು ಹಂಚುವುದರೊಂದಿಗೆ ಪ್ರೇಮ ಮತ್ತು ಭ್ರಾತೃತ್ವವನ್ನು ಬಲಗೊಳಿಸುವ ಹಾಗೂ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಯಾತ್ರೆಯನ್ನು ಪ್ರಾರಂಭಿಸಿದರು. ಈ ಗುಂಪನ್ನು ಪ್ರಶಿಕ್ಷಕರಾದ ಸೋ.ರವಿ ಜೈನ್ ಮತ್ತು ಸೋ.ಆರ್.ಕೆ.ಮಾಲ್ವಿಯ ಅವರುಗಳು ಸ್ವಾಗತಿಸಿ ಶುಭಕೋರಿದರು. ಯಾತ್ರೆಯು ಅದಲ್‌ಹಾತ್, ರಾಬರ್ಟ್ಸ್‌ಗಂಜ್, ರೇನುಕೂಟ್, ಶಕ್ತಿನಗರ್ ಮತ್ತು ಧುದಿಗಳಲ್ಲೆಲ್ಲಾ ಅಲ್ಲಿನ ಸ್ಥಳೀಯ ಮತ್ತು ಹತ್ತಿರದ ಕೇಂದ್ರಗಳ ಅಭ್ಯಾಸಿಗಳಿಂದ ಸ್ವಾಗತಿಸಲ್ಪಟ್ಟಿತು. ಅದಲ್‌ಹಾತ್ ಮತ್ತು ರಿಹಾಂದನಗರಗಳಲ್ಲಿ ಗೃಹಕೂಟಗಳನ್ನು ಏರ್ಪಡಿಸಲಾಗಿತ್ತು. ರಾಬರ್ಟ್ಸ್‌ಗಂಜ್, ಶಕ್ತಿನಗರ್ ಮತ್ತು ಧುದಿಗಳಲ್ಲಿ ಸತ್ಸಂಗಗಳಿದ್ದವು. ಎರಡು ದಿನಗಳ ಈ ಪ್ರವಾಸದಲ್ಲಿ ಪ್ರತೀ ಅಭ್ಯಾಸಿಗಳು ಗುರುಗಳು ಸ್ವತಃ ತಮ್ಮೊಡನೆ ಪ್ರಯಾಣಿಸುತ್ತಿರುವ ಅನುಭವ ಪಡೆದರು. ಅವರ ಪ್ರೇಮ ಮತ್ತು ಉಪಸ್ಥಿತಿಯು ಪ್ರತೀ ಅಭ್ಯಾಸಿಯ ಹೃದಯದಲ್ಲಿ ಅನುರಣಿಸಿತು. ಈ ಎಲ್ಲಾ ಕೇಂದ್ರಗಳ ಅಭ್ಯಾಸಿಗಳು ತೋರಿದ ಪ್ರೇಮ ಮತ್ತು ಆದರಗಳು ಅದ್ಭುತ ಮತ್ತು ಮರೆಯಲಾಗದಂತದ್ದು.

## ಯುವ ಕಾರ್ಯಕ್ರಮಗಳು

### ಅಹಮದಾಬಾದ್, ಗುಜರಾತ್

ಫೆಬ್ರವರಿ 25–26 ಅಹಮದಾಬಾದ್ ಆಶ್ರಮದ ಧ್ಯೇಯ ವಾಕ್ಯ “ತಾರುಣ್ಯ–ಪ್ರತಿಜ್ಞೆ ಮತ್ತು ಪರಿಶ್ರಮಕ್ಕೆ ಸಕಾಲ” ಎಂಬುದಾಗಿತ್ತು. ಭಾಗವಹಿಸಿದ್ದ ಅಭ್ಯಾಸಿಗಳನ್ನು ಎರಡು ಸಣ್ಣ ಗುಂಪುಗಳನ್ನಾಗಿ ಮಾಡಿ ಆಶ್ರಮದಲ್ಲಿ ಕೆಲಸಗಳನ್ನು ಹಂಚಲಾಯಿತು. ಅದಾದ ನಂತರ ಅವರುಗಳು ಕೆಲ ಹೊರಾಂಗಣ ಆಟಗಳನ್ನು ಆಡಿದರು. ಇವು ಗೆಲ್ಲುವದಕ್ಕಿಂತ ಆಡುವ ಸಂತೋಷಕ್ಕಾಗಿ ಆಗಿದ್ದವು. ಪುಣೆ ಕೇಂದ್ರದ ಅಭ್ಯಾಸಿಗಳು ಪ್ರಸ್ತುತ ಪಡಿಸಿದ ವೀಡಿಯೊ ಪ್ರದರ್ಶನವು ಯುವಕರು ಆಶ್ರಮದ ಯಾವ ಯಾವ ಚಟುವಟಿಕೆಗಳಲ್ಲಿ ಭಾಗವಹಿಸಬಹುದೆಂಬುದನ್ನು ಮನಗಾಣಿಸಿತು. ಭಾನುವಾರದ ಸತ್ಸಂಗದ ಎಲ್ಲರಿಗೂ ನಂತರ ಗುರುಗಳ ಸಂದೇಶಗಳನ್ನು ನೀಡಿ ಆಂತರಿಕ ಅವಲೋಕನ ಮಾಡುವಂತೆ ಹೇಳಲಾಯಿತು. ನಂತರ ತೋರಿಸಲಾದ ವೀಡಿಯೊ ತುಣುಕಗಳಿಂದ ಆಧ್ಯಾತ್ಮಿಕ ಅರ್ಥಗಳನ್ನು ಕಂಡುಕೊಳ್ಳಲು ಹೇಳಲಾಯಿತು.ಸೂರತ್‌ನ ಅಭ್ಯಾಸಿಗಳು ಲಾಲಾಜಿ ಮಹಾರಾಜರ ಜೀವನದ ಕಿರು ನಾಟಕವನ್ನು ಪ್ರದರ್ಶಿಸಿದರು. ಸಹಜಮಾರ್ಗವನ್ನು ಸಾರ್ವಜನಿಕವಾಗಿ ಹೇಗೆ ವ್ಯಕ್ತಪಡಿಸಬೇಕು ಹಾಗೂ ಮಾತನಾಡಬೇಕೆಂಬುದರ ಬಗ್ಗೆ ಕೆಲ ಉಪಯುಕ್ತ ಮಾಹಿತಿಗಳನ್ನು ನೀಡಲಾಯಿತು. ಕಾರ್ಯಕ್ರಮದ ನಂತರ ಆಳವಾದ ಬಾಂಧವ್ಯದ ಅನುಭವವು ಯುವ ಅಭ್ಯಾಸಿಗಳಲ್ಲಿ ಉಂಟಾಗಿತ್ತು.


### ಭಿಲ್ವಾರ , ರಾಜಸ್ಥಾನ

26 ಫೆಬ್ರವರಿಯಂದು 'ಪ್ರೇಮ' ಎಂಬ ವಿಷಯದ ಬಗೆಗಿನ ಯುವ ಕಾರ್ಯಕ್ರಮದಲ್ಲಿ ಏಳು ಜನ ಅಭ್ಯಾಸಿಗಳು ಭಾಗವಹಿಸಿದ್ದರು. ಅವರು ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವುದರೊಂದಿಗೆ ಪುಸ್ತಕಗಳಲ್ಲಿರುವ ಕೆಲ ಭಾಗಗಳ ಮೇಲೂ ಚರ್ಚೆ ನಡೆಸಿದರು. 25 ಮಾರ್ಚ್‌ನ ಸತ್ಸಂಗದ ನಂತರ ಹೇಗೆ ಸಹಜಮಾರ್ಗದ ಯುವ ಅಭ್ಯಾಸಿಗಳಲ್ಲಿ ಜಾಗೃತಿ ಮೂಡಿಸುವುದು ಮತ್ತು ಅವರು ಮಿಶನ್ನಿನ ಚಟುವಟಿಕೆಗಳಲ್ಲಿ ಭಾಗವವಹಿಸುವಂತೆ ಮಾಡುವುದು ಎಂಬ ಚರ್ಚೆಯಲ್ಲಿ 9 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಪ್ರತೀ ವಾರದ ಸತ್ಸಂಗದ ನಂತರ ಕಿರುನಾಟಕಗಳನ್ನು ಪ್ರದರ್ಶಿಸುವ ಹಾಗೂ ಬೇಸಿಗೆಯಲ್ಲಿ ಪ್ರವಾಸ ಮಾಡಿ ಬಾಂಧವ್ಯದ ಬೆಳೆಸುವ ಸಲಹೆಗಳನ್ನು ಸ್ವೀಕರಿಸಲಾಯಿತು.


## ಹೊಸ ಪ್ರಕಟಣೆಗಳು





ಪ್ರೇಮ ಮತ್ತು ಮರಣದ ಮರುಮುದ್ರಣ– ತಮಿಳಿನಲ್ಲಿ




ಹಾರ್ಟ್ ಸ್ಪೀಕ್ 2011– ಆಂಗ್ಲ ಭಾಷೆ




ಹಾರ್ಟ್ ಸ್ಪೀಕ್ 2010 ಡಿ.ವಿ.ಡಿ




ಬಾಬೂಜಿ ಇನ್ ಶಹಜಹಾನ್‌ಪುರ್ 1971–1975 ಎಂ.ಪಿ.3




ಹಾರ್ಟ್ ಸ್ಪೀಕ್ 2009, ಹೃದಯವಾಣಿ ಸರಣಿಗೆ ಹೊಸ ಸೇರ್ಪಡೆ. ಗುರುಗಳು 2009 ರಲ್ಲಿ ಭಾರತದಲ್ಲಿ ಮಾಡಿದ ಭಾಷಣಗಳು ಹಾಗೂ ಅನೌಪಚಾರಿಕ ಮಾತುಗಳ ಸಂಗ್ರಹ.




ವ್ಹಿಸ್ಪರ್ಸ್ (ಆಯ್ದ ಸಂದೇಶಗಳು) ಎಮ್.ಪಿ.3




ಹಾರ್ಟ್ ಸ್ಪೀಕ್ 2008 ಎಂ.ಪಿ.3

## ಆಶ್ರಮದ ಅಭಿವೃದ್ಧಿ





### ಜೈಪುರ್, ಆಂಧ್ರಪ್ರದೇಶ

25 ಮಾರ್ಚ್‌ರಂದು ಗುರುಗಳು ಚೆನ್ನೈಯಿಂದಲೇ ಅದಿಲಾಬಾದ್ ಜಿಲ್ಲೆಯ ಜೈಪುರ್ ಆಶ್ರಮದ ಧ್ಯಾನ ಮಂದಿರವನ್ನು ಉದ್ಘಾಟಿಸಿದರು. ಅವರು ಈ ಹತ್ತು ಎಕರೆ ವಿಸ್ತೀರ್ಣವುಳ್ಳ ಆಶ್ರಮದ ವಿಡಿಯೋವನ್ನು ವೀಕ್ಷಿಸಿದರು. ಗುರುಗಳು ಉದ್ಘಾಟನೆಯನ್ನು ಘೋಷಿಸಿದ ನಂತರ 200ಕ್ಕೂ ಹೆಚ್ಚಿನ ಸಂಖ್ಯೆಯ ಅಭ್ಯಾಸಿಗಳು ಮೌನವಾಗಿ ಧ್ಯಾನ ಮಂದಿರವನ್ನು ಪ್ರವೇಶಿಸಿ ಸತ್ಸಂಗದಲ್ಲಿ ಪಾಲ್ಗೊಂಡರು. ಈ ಧ್ಯಾನ ಮಂದಿರವು 1500 ಅಭ್ಯಾಸಿಗಳು ಕೂರುವಷ್ಟು ಸ್ಥಳಾವಕಾಶ ಹೊಂದಿದೆ. ಈ ಕಲ್ಲಿದ್ದಲ ವಲಯದಲ್ಲಿರುವ ಹಲವಾರು ಕೇಂದ್ರಗಳಾದ ಗೋದಾವರಿಖನಿ, ಮಂಚೇರಿಯಲ್, ಶ್ರೀರಾಮ್‌ಪುರ್, ಮಂಡಮರ್ರಿ, ಬೆಲಾಂಪಲ್ಲಿ ಮತ್ತು ಗೊಲೆಟಿಗಳಿಗೆ ಈಗ ಮಿಷನ್ನಿನ ಆಶ್ರಮ ಲಭ್ಯವಾಗಿದೆ.

### ಬರ್ಗೂರ್, ತಮಿಳುನಾಡು

ಸೋ.ಎಸ್.ಪ್ರಕಾಶ್(ವಲಯಮುಖ್ಯಸ್ಥ, ತಮಿಳುನಾಡು ಉತ್ತರ)ರವರು ತಮಿಳುನಾಡಿನ ಕೃಷ್ಣಗಿರಿಯ ಬಳಿಯ ಬರ್ಗೂರಿನ ಧ್ಯಾನ ಮಂದಿರವನ್ನು ಮಾರ್ಚ್ 3ರಂದು ಉದ್ಘಾಟಿಸಿದರು. 50 ಮಂದಿ ಅಭ್ಯಾಸಿಗಳು ಹಾಜರಿದ್ದು ಸತ್ಸಂಗದ ನಂತರ ಅಭ್ಯಾಸಿಗಳ ಗುಣಮಟ್ಟ ಮತ್ತು ಸಂಖ್ಯೆಯನ್ನು ಹೆಚ್ಚು ಮಾಡುವುದರ ಬಗ್ಗೆ ಚರ್ಚೆ ನಡೆಯಿತು.

### ಚಿಖಲಿ, ಮಹಾರಾಷ್ಟ್ರ

2005ರಲ್ಲಿ ಚಿಖಲಿಯಲ್ಲಿ ಸ್ಥಳ ಖರೀದಿ ಮಾಡಿದ್ದು ಇಷ್ಟು ವರ್ಷಗಳಲ್ಲಿ ಧ್ಯಾನ ಮಂದಿರ, ಗುರುಗಳ ಕಾಟೇಜ್, ಅಡಿಗೆಮನೆಗಳ ನಿರ್ಮಾಣವಾಗಿದ್ದು ಗುರುಗಳಿಂದ ಉದ್ಘಾಟನೆಗಾಗಿ ಕಾಯಲಾಗುತ್ತಿತ್ತು. ಗುರುಗಳ ಪ್ರವಾಸ ಈಗ ಮಿತಿಗೊಳಪಟ್ಟಿದ್ದರಿಂದ 12 ಮಂದಿ ಅಭ್ಯಾಸಿಗಳ ಗುಂಪೊಂದು ಆಶ್ರಮದ ವಿಡಿಯೊದೊಂದಿಗೆ ಗುರುಗಳನ್ನು ಭೇಟಿ ಮಾಡಿತು. ಫೆಬ್ರವರಿ 27ರಂದು ಗುರುಗಳು ಆಶ್ರಮದ ಉದ್ಘಾಟನೆಯನ್ನು ಘೋಷಿಸಿದರು. ಎಲ್ಲರಿಗೂ ಆಶ್ಚರ್ಯವಾಗುವಂತೆ ಗುರುಗಳು 29ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ಚಿಖಲಿ ಆಶ್ರಮವನ್ನು ಸಂಪರ್ಕಿಸಿದರು. ಅವರು ಅಭ್ಯಾಸಿಗಳೊಂದಿಗೆ ಸ್ಥಳೀಯ ಭಾಷೆಯಲ್ಲಿಯೇ ಸಂವಾದ ನಡೆಸಿದ ನಂತರ ಸೋ.ನಿವೃತ್ತಿಯವರಿಗೆ ಸತ್ಸಂಗ ಪ್ರಾರಂಭಿಸಲು ಸೂಚಿಸಿದರು. ಅಲ್ಲಿ ಚಿಖಲಿ ಮತ್ತು ಹತ್ತಿರದ ಬುಲ್ದಾನ, ಖಾಮ್‌ಗಾಂವ್, ಕಿನ್ಹೋಲ ಮತ್ತು ದೇಲ್ಗಾಂವ್ ಘಟಿಯ 100ರಷ್ಟು ಅಭ್ಯಾಸಿಗಳು ಹಾಜರಿದ್ದರು.

### ದಾಮನ್

ಅಕ್ಟೋಬರ್ 2008ರವರೆಗೂ ದಾಮನ್‌ನ ಅಭ್ಯಾಸಿಗಳು ಭಾನುವಾರದ ಸತ್ಸಂಗಕ್ಕಾಗಿ ವಾಪಿಗೆ ಹೋಗಬೇಕಾಗಿದ್ದಿತು. ನವಂಬರ್ 2008ರಲ್ಲಿ ಗುರುಗಳು ಸೋ.ಶೈಲೇಂದ್ರರನ್ನು ಪ್ರಶಿಕ್ಷಕರನ್ನಾಗಿ ನೇಮಿಸಿದ ನಂತರ ಸೋ.ಪಾಂಡೆಯವರ ಮನೆಯಲ್ಲಿ 20 ಅಭ್ಯಾಸಿಗಳಿಗಾಗಿ ಸತ್ಸಂಗವು ನಡೆಯುತ್ತಿತ್ತು. ಅಭ್ಯಾಸಿಗಳ ಸಂಖ್ಯೆಯು 35 ಮುಟ್ಟುತ್ತಿದ್ದಂತೆ ಸೋ.ಪಾಂಡೆಯವರು ತಮ್ಮ ಮೊದಲ ಅಂತಸ್ತಿನಲ್ಲಿ ಧ್ಯಾನಮಂದಿರ ನಿರ್ಮಿಸಲು ಅವಕಾಶವಿತ್ತರು. ಮಾರ್ಚ್ 2012ರಲ್ಲಿ 1600 ಚ.ಅಡಿಗಳ ಧ್ಯಾನ ಮಂದಿರವು ಪೂರ್ಣಗೊಂಡಿತು. ಅಭ್ಯಾಸಿಗಳು ಫ್ಯಾನ್‌ಗಳು, ಕುರ್ಚಿಗಳು, ಮೇಜು, ಒಂದು ಪುಸ್ತಕ ಕಪಾಟುಗಳನ್ನು ನೀಡಿದರು.

ಏಪ್ರಿಲ್ 1ರಂದು ಹೊಸ ಧ್ಯಾನ ಮಂದಿರದ ಹತ್ತಿರದ ಅಭ್ಯಾಸಿಗಳು ಮತ್ತು ಸೂರತ್‌ನ ಕೇಂದ್ರಮುಖ್ಯಸ್ಥ ಮತ್ತು ಗುಜರಾತ್‌ನ ವಲಯ ಮುಖ್ಯಸ್ಥರ ಉಪಸ್ಥಿತಿಯಲ್ಲಿ ಉದ್ಘಾಟನೆಗೊಂಡಿತು. ತೊಂಭತ್ತು ಅಭ್ಯಾಸಿಗಳು, ಇಪ್ಪತ್ತೊಂದು ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸೋ.ಅನಿಲ್, ಸೋ.ರಾಜುಭಾಯಿ, ಮತ್ತು ಸೋ.ಸುರೇಂದ್ರರಿಂದ ಭಾಷಣಗಳಾದವು. ಹತ್ತಿರದ ಕೇಂದ್ರಗಳ ಅಭ್ಯಾಸಿಗಳು ತಮ್ಮ ಕೇಂದ್ರಗಳ ಅಭಿವೃದ್ಧಿಗಾಗಿ ನಡೆಸುತಿರುವ ಹಲವಾರು ಚಟುವಟಿಕೆಗಳ ಬಗ್ಗೆ ಅನುಭವಗಳನ್ನು ಹಂಚಿಕೊಂಡರು. ಆ ದಿನ ನೈತಿಕ ಮೌಲ್ಯಗಳ ಕುರಿತು ಒಂದು ಕಿರು ನಾಟಕ ಮತ್ತು ಅಭ್ಯಾಸಿಗಳು ಮತ್ತು ಮಕ್ಕಳಿಂದ ಭಜನ್‌ಗಳು ಸಹ ನಡೆದವು.

### ವಿಳ್ಳುಪುರಮ್, ತಮಿಳುನಾಡು

ಗುರುಗಳಿಗೆ ವಿಳ್ಳುಪುರಮ್ ಆಶ್ರಮದ ಜಮೀನಿನ ದಾಖಲೆ ಪತ್ರಗಳನ್ನು ನೀಡುವ ಸಲುವಾಗಿ ವಿಳ್ಳುಪುರಮ್‌ನ ಅಭ್ಯಾಸಿಗಳ ಗುಂಪು ಮಣಪಾಕ್ಕಂ ಆಶ್ರಮಕ್ಕೆ ಭೇಟಿ ನೀಡಿತ್ತು. ಕೇವಲ ಒಂಭತ್ತು ಮಂದಿಮಾತ್ರ ಗುರುಗಳನ್ನು ಭೇಟಿ ಮಾಡಬೇಕೆಂಬುದಾಗಿ ನಿರ್ಧರಿಸಿದ್ದರೂ, ಆಸಕ್ತ ಹಾಗೂ ತಮ್ಮ ಹೃದಯದಲ್ಲಿ ಗುರುಗಳನ್ನು ನೋಡುವ ಕಾತುರತೆ ಪ್ರೇಮಗಳನ್ನು ತುಂಬಿಕೊಂಡಿದ್ದ ಇತರರಿಗೂ ಗುರುಗಳನ್ನು ಭೇಟಿ ಮಾಡಲು ಅನುವು ಮಾಡಿಕೊಡಲಾಯಿತು. ಗುರುಗಳು ವಿಳ್ಳುಪುರಮ್‌ಗೆ ಭೇಟಿ ನೀಡುವುದಾಗಿ ಹೇಳಿ ಅಲ್ಲಿ ಬಂದರೆ ಒಂದು ದಿನದ ಮಟ್ಟಿಗೆ ಉಳಿದುಕೊಳ್ಳಬಹುದೇ ಎಂದು ವಿಚಾರಿಸಿಕೊಂಡರು. ಅವರು ಮಕ್ಕಳೊಂದಿಗೂ ಮಾತನಾಡುತ್ತಿದ್ದರು. ಗುರುಗಳು ಆಶ್ರಮ ನಿರ್ಮಾಣವನ್ನು ಪ್ರಾರಂಭಿಸಲು ಸೂಚಿಸಿದರು. ಅಭ್ಯಾಸಿಗಳು ಗುರುಗಳ ಭೇಟಿಯನಂತರ ಆನಂದಭರಿತರಾಗಿದ್ದು ಗುರುಗಳ ಕೃಪೆಗೊಳಗಾದ ಅನುಭವವನ್ನು ಹೊಂದಿದ್ದರು.

### ವಲಯಾಶ್ರಮ, ಬೆಂಗಳೂರು

ಬೆಂಗಳೂರಿನ ವಲಯಾಶ್ರಮದಲ್ಲಿ ಹೊಸ ಧ್ಯಾನಮಂದಿರದ ನಿರ್ಮಾಣವಾಗಿದೆ. ಈ ಹೊಸ ಧ್ಯಾನಮಂದಿರವು ಈ ಯುಗದ ಮಹಾತ್ಮ ಪೂಜ್ಯ ಗುರುಗಳಾದ ಬಾಬೂಜಿ ಮಹಾರಾಜರಿಗೆ ಫೆಬ್ರವರಿ 19 ,2012 ರಂದು ಗುರುಗಳಿಂದ ಸಮರ್ಪಿತವಾಯಿತು. ಈ ಧ್ಯಾನ ಮಂದಿರವು 80 X 120 ಚ.ಅಡಿಗಳ ವಿಸ್ತೀರ್ಣ ಹೊಂದಿದ್ದು 1200 ಅಭ್ಯಾಸಿಗಳಿಗೆ ಸ್ಥಳಾವಕಾಶವಿದೆ. ಇದು ತೆರೆದ ಮಾದರಿಯ ವಿನ್ಯಾಸವನ್ನು ಹೊಂದಿದ್ದು ಸುತ್ತಲಿನ ಹಸಿರು ಪರಿಸರ ಮತ್ತು ಸ್ಥಳೀಯ ವಾತಾವರಣಕ್ಕೆ ಹೊಂದಿಕೊಳ್ಳುವಂತಿದೆ.

2012ರ ಫೆಬ್ರವರಿ 26 ರಂದು ಈ ಸಂದರ್ಭದ ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಂದು ಬೆಳಗಿನ 9 ಹಾಗೂ ಸಂಜೆ 4ಕ್ಕೆ ಸತ್ಸಂಗಗಳು ನಡೆದವು. ಕಾರ್ಯಕ್ರಮದಲ್ಲಿ 1353 ಅಭ್ಯಾಸಿಗಳು ಹಾಗು 125 ಮಕ್ಕಳು ಬೆಂಗಳೂರು ಮತ್ತು ಹತ್ತಿರದ ಕೇಂದ್ರಗಳಿಂದ ಭಾಗವಹಿಸಿದ್ದರು. ಸೋ.ಎ.ಪಿ.ದೊರೈ, ಸೋ.ಪ್ರಸನ್ನ, ಸೋ.ನಾಗರಾಜ ಮತ್ತು ಸೋ.ವೆಂಕಟಾದ್ರಿಯವರಿಂದ ಆ ದಿನದ ಭಾಷಣಗಳಿದ್ದವು. ಅವುಗಳ ವಿಚಾರವು 'ಗುರು ಮತ್ತು ಗುರಿ'ಯತ್ತ ಕೇಂದ್ರಿತವಾಗಿದ್ದು, ಅಭ್ಯಾಸಿಗಳು ತಮ್ಮ ಆತ್ಮಾವಲೋಕನ ಮಾಡಿಕೊಳ್ಳಲು ಪ್ರಚೋದಿಸಿತು. ಆ ದಿನದ ಅನುಭವವು ಹೊಸದಾದ ಆಶ್ರಮ ನಿರ್ವಹಣಾ ತಂಡಕ್ಕೆ ಚೈತನ್ಯದಾಯಕವೂ ಪ್ರೇರೇಪಿಸುವಂತೆಯೂ ಇತ್ತು.





## ವಲಯಾಶ್ರಮ, ಬೆಂಗಳೂರು



ಬೆಂಗಳೂರಿನ ವಲಯಾಶ್ರಮದಲ್ಲಿ ಹೊಸ ಧ್ಯಾನಮಂದಿರದ ನಿರ್ಮಾಣವಾಗಿದೆ. ಈ ಹೊಸ ಧ್ಯಾನಮಂದಿರವು ಈ ಯುಗದ ಮಹಾತ್ಮ ಪೂಜ್ಯ ಗುರುಗಳಾದ ಬಾಬೂಜಿ ಮಹಾರಾಜರಿಗೆ ಫೆಬ್ರವರಿ 19 ,2012 ರಂದು ಗುರುಗಳಿಂದ ಸಮರ್ಪಿತವಾಯಿತು. ಈ ಧ್ಯಾನ ಮಂದಿರವು 80 X 120 ಚ.ಅಡಿಗಳ ವಿಸ್ತೀರ್ಣ ಹೊಂದಿದ್ದು 1200 ಅಭ್ಯಾಸಿಗಳಿಗೆ ಸ್ಥಳಾವಕಾಶವಿದೆ. ಇದು ತೆರೆದ ಮಾದರಿಯ ವಿನ್ಯಾಸವನ್ನು ಹೊಂದಿದ್ದು ಸುತ್ತಲಿನ ಹಸಿರು ಪರಿಸರ ಮತ್ತು ಸ್ಥಳೀಯ ವಾತಾವರಣಕ್ಕೆ ಹೊಂದಿಕೊಳ್ಳುವಂತಿದೆ.

2012ರ ಫೆಬ್ರವರಿ 26 ರಂದು ಈ ಸಂದರ್ಭದ ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಂದು ಬೆಳಗಿನ 9 ಹಾಗೂ ಸಂಜೆ 4ಕ್ಕೆ ಸತ್ಸಂಗಗಳು ನಡೆದವು. ಕಾರ್ಯಕ್ರಮದಲ್ಲಿ 1353 ಅಭ್ಯಾಸಿಗಳು ಹಾಗು 125 ಮಕ್ಕಳು ಬೆಂಗಳೂರು ಮತ್ತು ಹತ್ತಿರದ ಕೇಂದ್ರಗಳಿಂದ ಭಾಗವಹಿಸಿದ್ದರು. ಸೋ.ಎ.ಪಿ.ದೊರೈ, ಸೋ.ಪ್ರಸನ್ನ, ಸೋ.ನಾಗರಾಜ ಮತ್ತು ಸೋ.ವೆಂಕಟಾದ್ರಿಯವರಿಂದ ಆ ದಿನದ ಭಾಷಣಗಳಿದ್ದವು. ಅವುಗಳ ವಿಚಾರವು 'ಗುರು ಮತ್ತು ಗುರಿ'ಯತ್ತ ಕೇಂದ್ರಿತವಾಗಿದ್ದು, ಅಭ್ಯಾಸಿಗಳು ತಮ್ಮ ಆತ್ಮಾವಲೋಕನ ಮಾಡಿಕೊಳ್ಳಲು ಪ್ರಚೋದಿಸಿತು. ಆ ದಿನದ ಅನುಭವವು ಹೊಸದಾದ ಆಶ್ರಮ ನಿರ್ವಹಣಾ ತಂಡಕ್ಕೆ ಚೈತನ್ಯದಾಯಕವೂ ಪ್ರೇರೇಪಿಸುವಂತೆಯೂ ಇತ್ತು.

## ಪೂರ್ಣದಿನದ ಕಾರ್ಯಕ್ರಮಗಳು

### ಭಿಲ್‌ವಾರ, ರಾಜಸ್ಥಾನ( 4 ಮಾರ್ಚ್ 2012)

ಹೊಸ ಮತ್ತು ಹಳೆಯ ಅಭ್ಯಾಸಿಗಳು ತಾವು ಮಿಷನ್ನನ್ನು ಸೇರಲು ಕಾರಣಗಳಾಗಿದ್ದ ಮಾನಸಿಕ ಶಾಂತಿ, ಜೀವನದ ಸಮಸ್ಯೆಗಳಿಗೆ ಪರಿಹಾರ, ಸತ್ಯದ ಹುಡುಕಾಟ, ದೇವರ ಅನ್ವೇಷಣೆ ಇತ್ಯಾದಿಗಳ ಕುರಿತು ಚರ್ಚಿಸಿದರು. ನಂತರ ಅವರುಗಳು ಸಾಧನೆಯ ಹಾದಿಯಲ್ಲಿನ ಸಮಸ್ಯೆಗಳು ಮತ್ತು ಅಭ್ಯಾಸಿಗಳೊಡನೆ ಪರಸ್ಪರ ಸಂವಹನದಲ್ಲಿ ಬರುವ ಸಮಸ್ಯೆಗಳ ಕುರಿತು ಚರ್ಚಿಸಿದರು. ಈ ಎಲ್ಲಾ ಸಮಸ್ಯೆಗಳನ್ನು ಎದುರಿಸುವ ಸಮಯದಲ್ಲಿ ಹೇಗೆ ಗುರುಗಳ ಸಹಾಯ ಮತ್ತು ಉಪಸ್ಥಿತಿಯನ್ನು ತಾವು ಅನುಭವಿಸಿದೆವೆಂಬುದನ್ನು ಬಹಳ ಅಭ್ಯಾಸಿಗಳು ವ್ಯಕ್ತಪಡಿಸಿದರು. ಸಾರಾಂಶವು ಗುರುಗಳ ಅಪರಿಮಿತ ಪ್ರೀತಿ ಮತ್ತು ಸಹಾಯ ಅಭ್ಯಾಸಿಗಳ ಆಧ್ಯಾತ್ಮಿಕ ಹಾದಿಯಲ್ಲಿ ಹೇಗೆ ಪ್ರೇರೇಪಿಸುತ್ತಿದೆ ಎಂಬುದಾಗಿತ್ತು. ಕಾರ್ಯಕ್ರಮವು ತಮ್ಮ ಸಮಸ್ಯೆಗಳನ್ನು ಎದುರಿಸಲು ಮಾತ್ರವಲ್ಲದೆ ತಮ್ಮ ಅಂತಿಮ ಗುರಿಯನ್ನು ತಲುಪಲು ಅನುವಾಗುವಂತೆ ಗುರುಗಳ ಮೇಲಿನ ಶ್ರದ್ಧೆಯನ್ನು ಸಹ ಬೆಳಸುವುದರಲ್ಲಿ ಸಹಾಯಕವಾಗಿತ್ತು.

### ವಿರುಧುನಗರ್ ಆಶ್ರಮ, ತಮಿಳುನಾಡು



ವಿರುಧುನಗರ್ ಮತ್ತು ಹತ್ತಿರದ ಇತರ ಕೇಂದ್ರಗಳ 52 ಮಂದಿ ಅಭ್ಯಾಸಿಗಳು ಮಾರ್ಚ್ 18ರ ಪೂರ್ಣ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. 'ಸಂಕಲ್ಪದ ಶಕ್ತಿ', 'ಎಚ್ಚರಗೊಳ್ಳಿರಿ' ಇವು ಚರ್ಚೆಯ ವಿಷಯಗಳಾಗಿದ್ದವು. ಚರ್ಚೆಯಲ್ಲಿ ಗುರುಗಳ'ಗುರು ಮತ್ತು ಗುರಿ' ಪುಸ್ತಕದ ಓದು, ಅದರಲ್ಲಿನ ಉಕ್ತಿಗಳ ವಿವರಣೆಗಳು ಒಳಗೊಂಡಿದ್ದವು. ನಂತರ ತೋಟದ ಕೆಲಸ ಹಾಗು ಸ್ವಚ್ಛಗೊಳಿಸುವ ಸ್ವಯಂಸೇವೆ ಕೆಲಸದಲ್ಲಿ ಅಭ್ಯಾಸಿಗಳು ತೊಡಗಿಕೊಂಡರು. ಪೂರ್ಣದಿನದ ಕಾರ್ಯಕ್ರಮವು ಗುರುಗಳ ನಿರಂತರ ಸ್ಮರಣೆಯಲ್ಲಿರಲು ಅದ್ಭುತ ಅವಕಾಶವೆಂಬುದನ್ನು ಅಭ್ಯಾಸಿಗಳು ಅರಿತರು.



### ತಿರೂರ್ ಆಶ್ರಮ, ಕೇರಳ ( 25 ಮಾರ್ಚ್ 2012)

ತಿರೂರ್ ಆಶ್ರಮವು ನೈಸರ್ಗಿಕ ಸೌಂದರ್ಯದ ವರ ಪಡೆದಿದ್ದು ಇಲ್ಲೊಂದು ನದಿ ಮತ್ತು ಮೂರು ಕಡೆಯಿಂದಲೂ ಅರಬ್ಬಿ ಸಮುದ್ರವಿದೆ.ಇದು ತಿರೂರ್ ರೈಲ್ವೆ ನಿಲ್ದಾಣದಿಂದ 14 ಕಿ.ಮೀ ದೂರದಲ್ಲಿದೆ. ಈ ಆಶ್ರಮವು 2009ರ ಏಪ್ರಿಲ್ 4 ರಂದು ಉದ್ಘಾಟನೆಯಾಗಿದ್ದು ಅಂದಿನಿಂದಲೂ ಎಲ್ಲಾ ಭಾನುವಾರಗಳು ಪೂರ್ಣ ದಿನದ ಕಾರ್ಯಕ್ರಮಗಳಾಗಿ ನಡೆಯುತ್ತಿವೆ.

25 ಮಾರ್ಚ್ ರಂದು ವಿಶೇಷವಾದ ಪೂರ್ಣ ದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಕ್ಕಳೂ ಸೇರಿದಂತೆ ಹತ್ತಿರದ ಕೇಂದ್ರಗಳಾದ ಪೊನ್ನಾನಿ, ಮಂಜೇರಿ, ಪೆರಿನ್‌ತಲಮನ್ನ, ಪಟ್ಟಾಂಬಿ ಮತ್ತು ವಲಂಚೇರಿಯ 200 ಜನ ಇದರಲ್ಲಿ ಪಾಲ್ಗೊಂಡಿದ್ದರು.ಬೆಳಗಿನ 7.30ರ ಸತ್ಸಂಗದೊಂದಿಗೆ ಕಾರ್ಯಕ್ರಮ ಶುರುವಾಯಿತು. ಸಹಜಮಾರ್ಗದ ಜೀವನದ ಮೂರು 'ಎಮ್'ಗಳ ಬಗ್ಗೆ ಭಾಷಣಗಳಿದ್ದವು. ಭಾಷಣಗಳು ಬಹಳ ಉಪಯುಕ್ತವಾಗಿದ್ದು ಅಭ್ಯಾಸಿಗಳು ತಮ್ಮ ಜೀವನದಲ್ಲಿಬದಲಾವಣೆಗಳಿಗಾಗಿ ಇವುಗಳನ್ನು ಅಳವಡಿಸಿಕೊಳ್ಳುವುದಾಗಿ ಸಂಕಲ್ಪ ಮಾಡಿದರು.ಮಧ್ಯಾಹ್ನ ಯುವಸಭೆ ನಡೆಯಿತು. ಪ್ರತೀ ತಿಂಗಳು ಇಂತಹ ಯುವ ಸಭೆಗಳನ್ನು ಬೇರೆ ಬೇರೆ ಕೇಂದ್ರಗಳಲ್ಲಿ ನಡೆಸುವ ತೀರ್ಮಾನವಾಯಿತು. ಮಕ್ಕಳ ಕೇಂದ್ರಗಳಲ್ಲಿ ಕಿರು ನಾಟಕಗಳ ಕಾರ್ಯಕ್ರಮಕ್ಕೆ ಮಕ್ಕಳೆಲ್ಲಾ ಸೇರಿದ್ದರು. ಮೌಲ್ಯಾಧಾರಿತ ವಿಷಯಗಳ ಕಥೆಗಳನ್ನು ಹೇಳಿ ಅವುಗಳನ್ನು ಕಿರುನಾಟಕಗಳ ರೂಪದಲ್ಲಿ ಆಡಲು ಮಕ್ಕಳಿಗೆ ತಿಳಿಸಲಾಯಿತು. ಮಕ್ಕಳು ಅತಿ ಉತ್ಸಾಹದಿಂದ ತೊಡಗಿಕೊಂಡರು. ಕಾರ್ಯಕ್ರಮವು ಸಂಜೆಯ ಸತ್ಸಂಗದೊಂದಿಗೆ ಮುಕ್ತಾಯವಾಯಿತು.

# ಕಾರ್ಯಾಗಾರಗಳು ಮತ್ತು ಸಭೆಗಳು

## ಮುಂಬೈ ಅಭ್ಯಾಸಿಗಳಿಗಾಗಿ ಸಭೆ
### ಚೆನ್ನೈ – ಫೆಬ್ರವರಿ 26ರಿಂದ ಮಾರ್ಚ್ 3, 2012



ಫೆಬ್ರವರಿ 26ರಂದು ಮುಂಬೈನಿಂದ ಸುಮಾರು 500 ಅಭ್ಯಾಸಿಗಳು ಗುರುಗಳು ವೇದಿಕೆಯ ಮೇಲೆ ಸತ್ಸಂಗ ನಡೆಸಿಕೊಡುವುದನ್ನು ಮತ್ತು ವಿವಾಹಸಂಪನ್ನಗೊಳಿಸುವುದನ್ನು ಕಂಡು ಸಂತಸಿತರಾದರು. ಸೋ. ಕಮಲೇಶ್ ಪಟೇಲ್‌ರವರು ಮಾತನಾಡಿ, ಗುರುಗಳ ಭೌತಿಕ ಉಪಸ್ಥಿತಿಯ ಹೊರತಾಗಿ ಹೃದಯದಿಂದ ಅವರನ್ನು ಅನುಸರಿಸಿ ಎಂದರು.

ಸೋ. ಅಲ್ಬರ್ಟೋ ಮತ್ತು ಸೋ. ಲಲಿತಾ ಶ್ರೀನಿವಾಸನ್‌ರವರು 'ಭ್ರಾತೃತ್ವ' ಹಾಗೂ 'ಹೃದಯವಾಣಿ'ಯ ಕುರಿತು ಉಪನ್ಯಾಸಗಳು ಮತ್ತು ಚರ್ಚೆಗಳನ್ನು ನಡೆಸಿಕೊಟ್ಟರು. ಸಾಧನೆಯ ಬಗ್ಗೆ ಸೋ.ರಾಜಗೋಪಾಲ್, ಮಿಷನ್ನಿನಲ್ಲಿ ಸೇವೆ, ನಿರಂತರಸ್ಮರಣೆ ಮತ್ತು ಭ್ರಾತೃತ್ವದ ಬಗ್ಗೆ ಪ್ರಶ್ನೋತ್ತರಗಳನ್ನು ನಡೆಸಿಕೊಟ್ಟರು.

29ನೇ ಸಂಜೆಯಂದು ಗುರುಗಳು ಸುಮಾರು 50 ಹೊಸ ಅಭ್ಯಾಸಿಗಳನ್ನು ಅವರ ಕುಟೀರದಲ್ಲಿ ಭೇಟಿಯಾದರು. ಅವರು ಮಾರ್ಚ್ 1ರಂದು ಎಲ್ಲಾ ಅಭ್ಯಾಸಿಗಳೊಡನೆ ಕಾಲ ಕಳೆದು ಸಮಯನಿರ್ವಹಣೆಯ ಪ್ರಾಮುಖ್ಯತೆ ಬಗ್ಗೆ ಹೇಳುತ್ತಾ ಸಾಧನೆಯ ಗಂಭೀರತೆ ಹಾಗೂ ಸಮಯ ದೊರೆತಾಗಲೆಲ್ಲ ಧ್ಯಾನ ಮಾಡುವಂತೆ ಒತ್ತಿ ಹೇಳಿದರು.

ಅಭ್ಯಾಸಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವು ಆಯೋಜಿತವಾಗಿತ್ತು. ಸಾಧನೆಯೆಡೆ ಹೆಚ್ಚು ಸಮರ್ಪಣಾ ಮನೋಭಾವ ಹೊಂದಲು ಮತ್ತು ನಾವೇನಾಗಲು ಅವರು ಬಯಸುತ್ತಾರೆಯೋ, ಅಂತಾಗಲು ಈ ಸಭೆಯು ವರ್ಧಕದಂತಾಯಿತು.

## ಪ್ರಶಿಕ್ಷಕರ ಪ್ರಶಿಕ್ಷಣಾ ಕಾರ್ಯಕ್ರಮ
### ಆರ್.ಕೆ.ಪುರಂ ಆಶ್ರಮ, ಹೊಸ ದೆಹಲಿ, ಮಾರ್ಚ್ 23–25, 2012



ಪ್ರಶಿಕ್ಷಕರ ಪ್ರಶಿಕ್ಷಣಾ ಕಾರ್ಯಕ್ರಮವನ್ನು ಆಧ್ಯಾತ್ಮಿಕ ತರಬೇತಿ ಕೊಡುಗೆ(SPD) ತಂಡದ ಮುಖ್ಯಸ್ಥರಾದ ಸೋ. ಸಂತೋಷ್ ಶ್ರೀನಿವಾಸನ್‌ರವರು ಆಯೋಜಿಸಿದ್ದರು. ಅನೇಕ ಕಾರ್ಯಾಗಾರಗಳನ್ನು ನಡೆಸಿಕೊಟ್ಟು, ಮಿಷನ್ನಿನ ಕಾರ್ಯಪ್ರಮುಖರೊಂದಿಗೆ ಚರ್ಚಿಸಿದ ನಂತರ ತಂಡವು ಅಭ್ಯಾಸಿ ತರಬೇತಿಗೆ ಪ್ರಾಶಸ್ತ್ಯ ನೀಡಿ 'ಸಾಧನೆಯ ಮೂಲ ಪಾಯ'ಎಂಬ ತರಬೇತಿಯ ಭಾಗಗಳನ್ನು ಹೊರತಂದಿದ್ದಾರೆ. ತಮ್ಮ ಕೇಂದ್ರಗಳ ಅಭ್ಯಾಸಿಗಳಿಗೆ ತರಬೇತು ನೀಡುವಂತೆ ವಿವಿಧ ಕೇಂದ್ರಗಳ ಪ್ರತಿನಿಧಿಗಳನ್ನು ತರಬೇತುಗೊಳಿಸಲು ಈ ಕಾರ್ಯಾಗಾರವನ್ನು ನಡೆಸಲಾಯಿತು.

ಉತ್ತರ ಭಾರತದ ವಲಯ 9–12 ಮತ್ತು 18ರಿಂದ ಸುಮಾರು 63 ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮಯದಲ್ಲಿ ದೆಹಲಿಯಲ್ಲೇ ಇದ್ದ ಸೋ.ಕಮಲೇಶ್ ಪಟೇಲ್‌ರವರು 24 ಮಾರ್ಚ್‌ರಂದು ಅತಿಥಿಗಳನ್ನುದ್ದೇಶಿಸಿ ಮಾತನಾಡಿದರು. ಈ ಕಾರ್ಯಾಗಾರದಲ್ಲಿ ಪಾಲ್ಗೊಂಡದ್ದರಿಂದ ಬಹಳ ಲಾಭವಾಯಿತೆಂದು ಎಲ್ಲಾ ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

## ಪ್ರಶಿಕ್ಷಕರಿಗಾಗಿ ಸಭೆ
### ವಡುಗಪಟ್ಟಿ ಆಶ್ರಮ, ತಮಿಳುನಾಡು

ತಿರುಚ್ಚಿಯ ವಡುಗಪಟ್ಟಿ ಆಶ್ರಮದಲ್ಲಿ ತಮಿಳುನಾಡು ಉತ್ತರವಲಯದ ಅರವತ್ತೆಂಟು ಪ್ರಶಿಕ್ಷಕರಿಗಾಗಿ ಮಾರ್ಚ್ 16 ಮತ್ತು 17ರಂದು ಎರಡು ದಿನದ



ಸಭೆಯನ್ನು ನಡೆಸಲಾಯಿತು. ವಲಯ ಮುಖ್ಯಸ್ಥರಾದ ಸೋ. ಎಸ್.ಪ್ರಕಾಶ್‌ರವರು 'ಆಧ್ಯಾತ್ಮ–ಎಲ್ಲರಿಗಾಗಿ' ಎಂಬ ವಿಷಯ ಹೊಂದಿದ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ವಲಯದ ಪ್ರತಿಯೊಬ್ಬ ಆಧ್ಯಾತ್ಮಿಕ ಆಕಾಂಕ್ಷಿಯೂ 2017ನೇ ಇಸ್ವಿಯ ಹೊತ್ತಿಗೆ ಸಹಜಮಾರ್ಗದ ಬಗ್ಗೆ ಒಮ್ಮೆಯಾದರೂ ಕೇಳಿರಲೇಬೇಕೆನ್ನುವುದು ಇದರ ಮೂಲೋದ್ದೇಶ.

ವಿಷಯದ ಕುರಿತು ಚರ್ಚೆ ಮತ್ತು ವಿಚಾರಸರಣಿ ನಡೆಯಿತು. ಭಾಗಿಗಳನ್ನು ಗುಂಪುಗಳಲ್ಲಿ ವಿಂಗಡಿಸಿ, ವಿಷಯದ ಕುರಿತು ಕಿರುನಾಟಕವೊಂದನ್ನು ಸೃಷ್ಟಿಸಿ, ಅಭಿನಯಿಸಲು ಹೇಳಲಾಯಿತು. ನಾಟಕಗಳು ಹಾಸ್ಯಭರಿತವಾಗಿಯೂ, ಕೆಲವೊಮ್ಮೆ ವಿಚಾರಕ್ಕೀಡು ಮಾಡುವಂತೆಯೂ ಇದ್ದವು. ವಿಚಾರಗಳನ್ನೆಲ್ಲ ಪಟ್ಟಿಮಾಡಿ ಯೋಜನೆಗಳಿಗಾಗಿ ಸಂಕ್ಷಿಪ್ತಗೊಳಿಸಲಾಯಿತು.

ಎರಡನೇ ದಿನದಂದು, ತಂಡವು ತಂಜಾವೂರಿಗೆ ತೆರಳಿ ಕೆಲವು ಪ್ರಶಿಕ್ಷಕರ ಉಪನ್ಯಾಸಗಳನ್ನು ಆಲಿಸಿದರು. ಸೋ. ಎಸ್.ಪ್ರಕಾಶ್‌ರವರು ಸಾಂಘಿಕ ಕಾರ್ಯದ ಅಗತ್ಯ ಹಾಗೂ ಗುರಿಯೆಡೆಗೆ ಏಕಾಗ್ರತೆಯನ್ನು ಪುನಃ ನೆನಪಿಸಿದರು.

## ಮಿಷನ್ನಿನ ಸಾಹಿತ್ಯದ ಬಗ್ಗೆ ಕಮ್ಮಟ, ಕರ್ನಾಟಕ

ಬೆಂಗಳೂರಿನ ಪ್ರಕಾಶನ ವಿಭಾಗದ ಸ್ವಯಂಸೇವಕರು, ಅಭ್ಯಾಸಿಗಳು ಮಿಷನ್ನಿನ ಸಾಹಿತ್ಯವನ್ನೋದಲು ಪ್ರೇರೇಪಿಸುವುದಕ್ಕಾಗಿ ಕಮ್ಮಟವೊಂದನ್ನು ಏರ್ಪಡಿಸಿದರು. ಇದು ಶಿವಮೊಗ್ಗ ಮತ್ತು ಹುಣಸೂರಿನಲ್ಲಿ ಜರುಗಿತು.

ಫೆಬ್ರುವರಿ 12ರಂದು ನಡೆದ ಕಾರ್ಯಕ್ರಮದಲ್ಲಿ, ಶಿವಮೊಗ್ಗ, ಭದ್ರಾವತಿ, ನ್ಯಾಮತಿ ಮತ್ತು ಮಂಗಳೂರು ಕೇಂದ್ರಗಳಿಂದ 32 ಅಭ್ಯಾಸಿಗಳು ಪಾಲ್ಗೊಂಡಿದ್ದರು. 25ನೇ ಮಾರ್ಚದಂದು, ಹುಣಸೂರು, ಪಿರಿಯಾಪಟ್ಟಣದಿಂದ ಸುಮಾರು 30 ಅಭ್ಯಾಸಿಗಳು ಶಾಸ್ತ್ರಿ ಪಾಠಶಾಲೆಯ ಸಭಾಂಗಣದಲ್ಲಿ ಕೂಡಿದ್ದರು.

ಎರಡೂ ಸ್ಥಳಗಳಲ್ಲಿ ಅಭ್ಯಾಸಿಗಳಿಗೆ ಮಿಷನ್ನಿನ ಪುಸ್ತಕಗಳನ್ನೋದಲು ಹಾಗೂ ಪೂಜ್ಯ ಗುರುಗಳು ಹೇಳಿದ ಕಥೆಗಳನ್ನು ಆರಿಸಿಕೊಳ್ಳಲು ಮುಂಚಿತವಾಗಿಯೇ ತಿಳಿಸಲಾಗಿತ್ತು. ನಮ್ಮ ಸಾಧನೆಯ ಒಂದು ಭಾಗವಾಗಿ ಮಿಷನ್ನಿನ ಸಾಹಿತ್ಯವನ್ನು ದಿನನಿತ್ಯ ಕಾಳಜಿಯಿಂದ ಹಾಗೂ ಉದ್ದೇಶಪೂರಿತವಾಗಿ ಓದಬೇಕೆಂಬುದನ್ನು ವಿಶೇಷವಾಗಿ ಹೇಳಲಾಗಿತ್ತು.

ಅಭ್ಯಾಸಿಗಳನ್ನು ಗುಂಪುಗಳನ್ನಾಗಿ ವಿಭಾಗಿಸಲಾಯಿತು, ಹಾಗು ತಾವು ಆರಿಸಿಕೊಂಡ ಕಥೆಗಳನ್ನು ಓದಲು ಹಾಗೂ ಅವುಗಳ ಮೌಲ್ಯಗಳಬಗ್ಗೆ ಚರ್ಚಿಸಿ ಇದನ್ನು ನಮ್ಮ ದಿನನಿತ್ಯ ಜೀವನದಲ್ಲಿ ಅಳವಡಿಸಲಾಗುತ್ತಿದೆಯೇ? ಇಲ್ಲವಾದಲ್ಲಿ ಅದರಲ್ಲಿ ಬರುವ ಅಡಚಣೆಗಳಾವುವು ಹಾಗೂ ಅವುಗಳನ್ನು ನಿವಾರಿಸಿಕೊಂಡು ದಿನನಿತ್ಯದ ಜೀವನದಲ್ಲಿ ಬಿಂಬಿಸುವುದು ಹೇಗೆ ಎಂಬುದರ ಬಗ್ಗೆ ಚರ್ಚಿಸುವಂತೆ ತಿಳಿಸಲಾಯಿತು.

ಇದಾದ ನಂತರ ಗುರುಗಳು ಹೇಳಿದ ಕಥೆಗಳ ವಿಡಿಯೋ ತುಣುಕುಗಳನ್ನು ಪ್ರದರ್ಶಿಸಲಾಯಿತು. ಎಲ್ಲಾ ಅಭ್ಯಾಸಿಗಳು ಈ ಕಮ್ಮಟದಲ್ಲಿ ಕ್ರಿಯಾಶೀಲತೆಯಿಂದಲೂ, ಉತ್ಸಾಹದಿಂದಲೂ ಭಾಗವಹಿಸಿ, ಅದರ ಲಾಭವನ್ನು ಪಡೆದರು. ಮಿಷನ್ನಿನ ಸಾಹಿತ್ಯ ಮಾರಾಟದ ವ್ಯವಸ್ಥೆಯನ್ನೂ ಮಾಡಲಾಗಿತ್ತು.

## ಮಕ್ಕಳಿಗಾಗಿ ಕ್ರೀಡಾದಿನ

### ಬಾಬೂಜಿ ಮೆಮೋರಿಯಲ್ ಆಶ್ರಮ, ಚೆನ್ನೈ.

1ನೇ ಎಪ್ರಿಲ್ 2012,ರಂದು ಬಾಬೂಜೀ ಮೆಮೋರಿಯಲ್ ಆಶ್ರಮದಲ್ಲಿ, ಮಕ್ಕಳಿಗಾಗಿ ಕ್ರೀಡಾದಿನವನ್ನಾಚರಿಸಲಾಯಿತು. ಸುಮಾರು 160 ಮಕ್ಕಳು 6ರಿಂದ 8, 8ರಿಂದ 10, 10 ರಿಂದ 12 ರ ಮೂರು ವಯೋಘಟ್ಟಗಳಲ್ಲಿ, ವಿವಿಧ ಆಟಗಳಲ್ಲಿ ಭಾಗ ವಹಿಸಿದರು. ಚಮಚ–ನಿಂಬೆ, ಜೋಡಿಓಟ, ಕಪ್ಪೆಕುಪ್ಪಳಿಸುವಿಕೆ, ಅದೃಷ್ಟಸ್ಥಳ ಮುಂತಾದ ವಿವಿಧ ಆಟಗಳನ್ನು ಆಟದ ಮೈದಾನದಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಸಲಾಯಿತು. ಮಕ್ಕಳು ಅತಿ ಉತ್ಸಾಹದಿಂದ ಎಲ್ಲಾ ಆಟಗಳಲ್ಲಿ ಪಾಲ್ಗೊಂಡು ಮೋಜನ್ನನುಭವಿಸಿದರು. ಈ ಕಾರ್ಯಕ್ರಮವು ಮಕ್ಕಳು ಹಾಗೂ ಸ್ವಯಂಸೇವಕರಿಂದ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಬಹುಮಾನ ವಿತರಣೆಯ ಕಾರ್ಯಕ್ರಮವವನ್ನೂ ಸಹ ನೆರವೇರಿಸಲಾಯಿತು.



## ಸ್ವಯಂಸೇವಕರಿಗಾಗಿ ಕಮ್ಮಟ, ವೆಲ್ಲೂರು, ತಮಿಳುನಾಡು



25 ಮತ್ತು 26 ನೇ ಫೆಬ್ರುವರಿಯಂದು, ಸ್ವಯಂಸೇವಕರಿಗಾಗಿ ಆಯೋಜಿಸಿದ ಕಮ್ಮಟದಲ್ಲಿ, ವೆಲ್ಲೂರು ಪರಿಸರದ ಸುಮಾರು 40 ಅಭ್ಯಾಸಿಗಳು ಹಾಜರಿದ್ದರು. ಈ ಕಾರ್ಯಕ್ರಮದಲ್ಲಿ, ಸ್ವಯಂಸೇವಕರಿಗೆ ತಮ್ಮ ಸಾಧನೆ, ಸಾಂಘಿಕಕಾರ್ಯ ಮತ್ತು ಪ್ರತ್ಯಕ್ಷವಾಗಿ ಹೃದಯಗಳ ಜೋಡಣೆಯ ಮಹತ್ವ, ಈ ವಿಷಯದ ಬಗ್ಗೆ ಚಾಲನೆ ನೀಡಲು ಉದ್ದೇಶಿಸಲಾಗಿತ್ತು.

ಸಮೂಹಚರ್ಚೆಗಾಗಿ ನಾಲ್ಕು ವಿಷಯಗಳನ್ನು ಕೊಡಲಾಗಿತ್ತು. ಅವರಿಗೆ ಸಂಪರ್ಕಕ್ಕಾಗಿ, ವಿಶೇಷವಾಗಿ ಕೇಳಿಸಿಕೊಳ್ಳುವುದರ ಮಹತ್ವಗಳ ಬಗ್ಗೆ ಮಾರ್ಗದರ್ಶಕ ಸೂಚನೆಯನ್ನೂಸಹ ಪೂರೈಸಲಾಗಿತ್ತು. ಈ ಕಾರ್ಯಕ್ರಮದ ವೇಳೆಯಲ್ಲಿ ವಾತಾವರಣವು ದಿವ್ಯವಾಗಿತ್ತು.

## ಒಕ್ಕೂಟ

### ಸವಾಯಿ ಮಾಧೋಪುರ

ಮಾರ್ಚ 3ರಂದು ಸವಾಯಿ ಮಾಧೋಪುರದ ಅಭ್ಯಾಸಿಗಳು ಸಹಜಮಾರ್ಗದ ಸಾಧನೆ ಹಾಗೂ ರಸಪ್ರಶ್ನೆಗಳ ಸತ್ರಕ್ಕಾಗಿ ಒಂದುಗೂಡಿದ್ದರು. ಈ ಚಟುವಟಿಕೆಯನ್ನು ಸೋ. ಅಯೋಧ್ಯಾಪ್ರಸಾದರವರು ಆಯೋಜಿಸಿದರು ಹಾಗೂ ಜೈಪೂರ ಕೇಂದ್ರದ ಸೋ.ಸಂದೀಪರವರು ನಡೆಸಿಕೊಟ್ಟರು. ಅಭ್ಯಾಸಿಗಳ ಎರಡು ಗುಂಪು ಮಾಡಲಾಯಿತು. ಎರಡೂ ಗುಂಪುಗಳು ಸಹಜಮಾರ್ಗದ ಸಾಧನೆಯ ಬಗ್ಗೆ ಹೆಚ್ಚಿನ ತಿಳುವಳಿಕೆಗಾಗಿ ಸೂಚನೆಗಳನ್ನಿತ್ತರು. ಸಂಪೂರ್ಣ ಸತ್ರವು ಚರ್ಚಾಪೂರ್ಣವಾಗಿತ್ತು ಹಾಗೂ ರಸಪ್ರಶ್ನೆಗಾಗಿ ಪೂಜ್ಯ ಗುರುಗಳ ಭಾಷಣಗಳಲ್ಲಿಯ ವಿಷಯಗಳನ್ನು ಆರಿಸಿಕೊಳ್ಳಲಾಗಿತ್ತು. ಸ್ಥಳೀಯ ಅಭ್ಯಾಸಿಗಳಿಗೆ ಯೋಜನಾಬದ್ಧವಾದ ಗೃಹಕೂಟಗಳನ್ನೇರ್ಪಡಿಸಲು ಪ್ರೇರೇಪಿಸಲಾಯಿತು.

## ಅಧ್ಯಾತ್ಮ ಹಾಗು ವೈದ್ಯಕೀಯ ವೃತ್ತಿ

11ನೇ ಮಾರ್ಚ್‌ರಂದು, ಕಾಸರಗೋಡಿನ ಬೇಲಾದಲ್ಲಿ "ಅಧ್ಯಾತ್ಮ ಹಾಗು ವೈದ್ಯಕೀಯ ವೃತ್ತಿ" ಈ ವಿಷಯದ ಬಗ್ಗೆ ಚರ್ಚಾಸತ್ರವೊಂದನ್ನು ಆಯೋಜಿಸಲಾಯಿತು. ಕ್ಯಾಲಿಕಟ್ ಹಾಗು ಕಾಸರಗೋಡನಿಂದ ಬಂದ 14 ವೈದ್ಯರ ಸತ್ರದಲ್ಲಿ, ವೈದ್ಯಕೀಯವೃತ್ತಿಯಲ್ಲಿದ್ದವರಿಗೆ "ವೈದ್ಯಕೀಯ ಶಿಕ್ಷಣದಲ್ಲಿ ಅಧ್ಯಾತ್ಮದ ಮಹತ್ವ" ದ ಬಗ್ಗೆ ತಿಳುವಳಿಕೆ ನೀಡುವ ಉದ್ದೇಶವಾಗಿತ್ತು. ಈಗಿನ ಉಪಚಾರಗಳು ಕೇವಲ ರೋಗಗಳ ಉಪಚಾರಕ್ಕೆ ಸೀಮಿತವಾಗಿದ್ದು, ರೋಗಪೀಡಿತ ಮಾನವನ ಬಗ್ಗೆ ಯೋಚಿಸುತ್ತಿಲ್ಲ. ವೈದ್ಯರು ತಮ್ಮ ಆದಾಯದ ಬಗ್ಗೆ ಯೋಚಿಸುತ್ತಿದ್ದರೆ, ರೋಗಿಯು ಖರ್ಚುಗಳಿಗಾಗಿ ಚಿಂತಿತನಾಗಿದ್ದಾನೆ. ವೈದ್ಯರು ಇಚ್ಛೆಪಟ್ಟರೆ ರೋಗಿಗಳಲ್ಲಿ ಧನಾತ್ಮಕ ಬದಲಾವಣೆಗಳನ್ನು ಮೂಡಿಸಿ ಅಧ್ಯಾತ್ಮದಕಡೆಗೆ ಒಲಿಸಬಹುದು.

## ಪ್ರಬಂಧ ಸ್ಪರ್ಧೆಯ ಪ್ರಮಾಣಪತ್ರ ವಿತರಣೆ

2011ರ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ ಮತ್ತು ವಿವಿಧ ಹಂತಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸುವ ಕಾರ್ಯಕ್ರಮಗಳು ದೇಶದ ವಿವಿಧ ಕೇಂದ್ರಗಳಲ್ಲಿ ನಡೆದವು. ಉತ್ತರ ಕರ್ನಾಟಕದ ಬಳ್ಳಾರಿ, ಗುಲ್ಬರ್ಗಾ, ಹುಬ್ಬಳ್ಳಿ ಮತ್ತು ಬೀದರ್, ತಮಿಳುನಾಡಿನ ಟೂಟಿಕೋರಿನ್, ತಿರುಚೆಂದುರ್, ಕೋವಿಲ್‌ಪಟ್ಟಿ, ಊಟಿ ಮತ್ತು ತಿರುಪ್ಪೂರು, ಗುಜರಾತ್‌ನ ಭುಜ್, ಮೆಹ್ಸಾನಾ ಮತ್ತು ವಡೋದರಾ ಮತ್ತು ಜಾರ್ಖಂಡ್ ಹಾಗು ರಾಂಚಿಗಳಲ್ಲಿ 2012ರ ಫೆಬ್ರವರಿ, ಮಾರ್ಚ್, ಏಪ್ರಿಲ್‌ಗಳಲ್ಲಿ ನಡೆಯಿತು. ವಿದ್ಯಾರ್ಥಿಗಳು, ಪೋಷಕರು ಮತ್ತು ಉಪಾಧ್ಯಾಯರುಗಳನ್ನು ಆಹ್ವಾನಿಸಲಾಗಿತ್ತು. ವಿವಿಧ ಶ್ರೇಣಿಯ ಬಹುಮಾನಗಳನ್ನು ಪಡೆದವರಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಮಿಷನ್ನಿನ ಚಟುವಟಿಕೆಗಳ ಬಗ್ಗೆ ಹಾಗೂ ಪ್ರಬಂಧ ಸ್ಪರ್ಧೆ ಏರ್ಪಡಿಸಿದ್ದರ ಹಿಂದಣ ತತ್ವಗಳ ಬಗ್ಗೆ ಭಾಷಣಗಳಿದ್ದವು. ಮಿಶನ್ನಿನ ಬಗ್ಗೆ ಹೆಚ್ಚು ತಿಳಿಯಲು ಆಸಕ್ತಿ ಇದ್ದವರಿಗೆ ಲಭ್ಯವಾಗುವಂತೆ ಮಿಷನ್ನಿನ ಪ್ರಕಟಣೆಗಳನ್ನು ಪ್ರದರ್ಶಿಸಲಾಗಿತ್ತು.


ಹುಬ್ಬಳ್ಳಿ, ಕರ್ನಾಟಕ


ತಿರುಪ್ಪೂರು, ತಮಿಳುನಾಡು


ತಿರುಪ್ಪೂರು, ತಮಿಳುನಾಡು



ಟೂಟಿಕೋರಿನ್, ತಮಿಳುನಾಡು


ಕೋವಿಲ್‌ಪಟ್ಟಿ, ತಮಿಳುನಾಡು



ಬೀದರ್, ಕರ್ನಾಟಕ


ವಡೋದರ, ಗುಜರಾತ್


ಭುಜ್, ಗುಜರಾತ್


ಊಟಿ, ತಮಿಳುನಾಡು


ಮೆಹ್ಸಾನಾ, ಗುಜರಾತ್


ಗುಲ್ಬರ್ಗಾ, ಕರ್ನಾಟಕ


ರಾಂಚಿ, ಜಾರ್ಖಂಡ್


# ಪ್ರಭಾ ಕೇಂದ್ರ

## ವಿಜಯವಾಡ ಆಶ್ರಮ, ಆಂಧ್ರಪ್ರದೇಶ

ವಿಜಯವಾಡವು ಭಾರತದ ಬಹಳ ಹಳೆಯ ಕೇಂದ್ರಗಳಲ್ಲೊಂದಾಗಿದ್ದು, ಸುಮಾರು ಐದು ದಶಕಗಳಿಗಿಂತಲೂ ಹೆಚ್ಚು ಸಮಯದಿಂದ ಈ ಪ್ರದೇಶದ ಅಭ್ಯಾಸಿಗಳಿಗೆ ಮಹತ್ವದ ಆಧ್ಯಾತ್ಮಿಕ ಕೇಂದ್ರವಾಗಿದೆ.

1959 ರಲ್ಲಿ ಪೂಜ್ಯ ಬಾಬೂಜೀಮಹಾರಾಜರು ಈ ಪಟ್ಟಣಕ್ಕೆ ಭೇಟಿ ನೀಡಿದಾಗ ಈ ಕೇಂದ್ರವು ಅಸ್ತಿತ್ವಕ್ಕೆ ಬಂದು ಆಗ ಇಲ್ಲಿ ಕೇವಲ ಅರ್ಧ ಡಜನ್ ಅಭ್ಯಾಸಿಗಳಿದ್ದರು. ಮತ್ತೆ ಅವರು 1963ರಲ್ಲಿ ಭೇಟಿನೀಡಿ, ಮೂರುದಿನ ತಂಗಿದ್ದು ಸತ್ಸಂಗಗಳನ್ನು ನೆರವೇರಿಸಿದರು. 1967 ನೇ ಮೇ ತಿಂಗಳ 25 ನೇ ದಿನದಂದು ಇಲ್ಲಿನ ಪ್ರಶಿಕ್ಷಕರಾದ ಡಾ.ವಿ.ಪಾರ್ಥಸಾರಥಿಯವರ ಮನೆಯ ಮಹಡಿಯ ಮೇಲಿನ ಧ್ಯಾನಮಂದಿರದ ಉದ್ಘಾಟನೆ ಮಾಡಿದರು. ಈ ಪ್ರದೇಶದಲ್ಲಿ ಭಾರಿ ಬಿರುಗಾಳಿ ಸಂಭವಿಸಿದ್ದಾಗಲೂ ಬಾಬೂಜಿ ಮಹಾರಾಜರು ವಿಜಯವಾಡದಲ್ಲಿದ್ದರು.

16 ಮೇ 1972ರಂದು ಸೋ.ಸುಂಕರ ವೆಂಕಟಪ್ಪಯ್ಯರವರು ಪಟ್ಟಣದ ಮಧ್ಯಭಾಗದಲ್ಲಿ 1672.26 ಚ.ಮೀ.ನ ಜಾಗವನ್ನು ದೇಣಿಗೆಯಾಗಿ ನೀಡಿದರು. ಆಶ್ರಮವು ಮುಖ್ಯ ರಸ್ತೆಯ ಮೇಲಿದ್ದು ಬಸ್ ಹಾಗೂ ರೈಲ್ವೆನಿಲ್ದಾಣದಿಂದ ಕೇವಲ ನಾಲ್ಕು ಕಿ.ಮೀ.ಅಂತರದಲ್ಲಿದೆ.



**ಪೂಜ್ಯ ಬಾಬೂಜೀ ಮಹಾರಾಜರು ದಿ. 25ನೇ ಮೇ 1967 ರಂದು ಧ್ಯಾನಮಂದಿರದ ಉದ್ಘಾಟನೆಯ ಸಮಯದಲ್ಲಿ ನೀಡಿದ ಸಂದೇಶ.**

"ನಮ್ಮ ಪೂರ್ವಜರು ತಮ್ಮ ಸಹಬಾಂಧವರ ಮತ್ತು ಇತರರೊಡಗಿನ ಎಲ್ಲಾ ಲೌಕಿಕ ಬಂಧನಗಳನ್ನು ತ್ಯಜಿಸಿ, ಸಾಕ್ಷಾತ್ಕಾರದ ಮಾರ್ಗಗಳನ್ನು ಸಾಂಸಾರಿಕ ಕೆಲಸಕಾರ್ಯಗಳಿಂದ ದೂರವಿರುವ ಕಾಡಿನಲ್ಲಿ ಅರಸುತ್ತಿದ್ದರು. ಕಾಡುಗಳು ಯಾವ ಉದ್ದೇಶಕ್ಕೆ ಸಲ್ಲುತ್ತಿದ್ದವೋ ಅದೇ ಉದ್ದೇಶಗಳನ್ನು ನಮ್ಮ ಮನೆಯಲ್ಲಿಯೇ, ನಮ್ಮ ಸುತ್ತಮುತ್ತ ನಿರ್ಮಿಸಲು ನಾವು ಸಹಜಮಾರ್ಗಪದ್ಧತಿಯಲ್ಲಿ ಪ್ರಯತ್ನಿಸುತ್ತೇವೆ."

18 ನೇ ಮಾರ್ಚ್1987 ರಂದು ಪೂಜ್ಯ ಗುರುಗಳು ಧ್ಯಾನಕಕ್ಷ, ಕಚೇರಿ, ವಸತಿಗೃಹ, ಮತ್ತು ಕುಟೀರವನ್ನೊಳಗೊಂಡ 420 ಚ.ಮೀ.ಕಟ್ಟಡ ನಿರ್ಮಾಣಕಾರ್ಯದ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಇದರ ಉದ್ಘಾಟನೆಯನ್ನು, 24 ನೇ ಜುಲೈ 1995 ರಂದು ಅಲಹಾಬಾದಿನ ಡಾ. ಚಂದ್ರಿಕಾಪ್ರಸಾದರವರಿಂದ ನೆರವೇರಿಸಲಾಯಿತು. ಪೂಜ್ಯ ಗುರುಗಳು 22, 23, 24 ನೇ ಡಿಸೆಂಬರ್ 2002 ಈ ಮೂರು ದಿನಗಳ ಭೇಟಿಯನ್ನು ಕೈಗೊಂಡಿದ್ದರು. ರಾಜ್ಯದ ಅನೇಕ ಕಡೆಯ ಅಭ್ಯಾಸಿಗಳು ಉಪಸ್ಥಿತರಿದ್ದು, ಗುರುಗಳ ಅನುಗ್ರಹವನ್ನು ಪಡೆದರು.



2005ನೇ ಸಾಲಿನಲ್ಲಿ, ಧ್ಯಾನಮಂದಿರಕ್ಕೆ ಒಳ್ಳೆಯ ಮೊಗಸಾಲೆಯನ್ನೊಳಗೊಂಡ ಮೊದಲನೆಯ ಮಹಡಿಯನ್ನು ಜೋಡಿಸಲಾಯಿತು. ನಂತರ ಧ್ಯಾನಮಂದಿರದ ಹಿಂದುಗಡೆಯಲ್ಲಿಯ 284 ಚ.ಮೀ.ನ ಕಟ್ಟಡವನ್ನು ಸಹಜಮಾರ್ಗ ಆಧ್ಯಾತ್ಮಿಕ ಸಂಸ್ಥೆಗಾಗಿ ಖರೀದಿಸಲಾಯಿತು. ಕಟ್ಟಡವನ್ನು ಪೂರ್ಣಗೊಳಿಸಲು ಇಲ್ಲೊಂದು ಅಡುಗೆಮನೆ ಹಾಗು ಪುಸ್ತಕಭಂಡಾರಗಳನ್ನು ಕಟ್ಟುವ ಯೋಜನೆ ಇದೆ.




SMSF ಕಟ್ಟಡದಲ್ಲಿಯ ವೈದ್ಯಕೀಯ ಕೇಂದ್ರವು ಎಲ್ಲಾ ಅನುಕೂಲಗಳನ್ನು ಹೊಂದಿದ್ದು, ಪ್ರತಿ ರವಿವಾರದಂದು ಅನೇಕ ಅಭ್ಯಾಸಿಗಳು ಮತ್ತು ಸ್ಥಳೀಯ ಜನರು, ಇಲ್ಲಿ ಉಪಲಬ್ಧವಿರುವ ವೈದ್ಯರ ಸೇವೆಯ ಲಾಭ ಪಡೆಯುತ್ತಾರೆ. ರೋಗಿಗಳಿಗೆ ಔಷಧಿಗಳನ್ನು ಪುಕ್ಕಟೆಯಾಗಿ ಕೊಡಲಾಗುತ್ತದೆ.

ಈ ಆಶ್ರಮದಲ್ಲಿ ಪ್ರತಿದಿನ ಬೆಳಗಿನ ಸತ್ಸಂಗವಾಗುವುದಲ್ಲದೆ, ಬುಧವಾರ ಹಾಗು ರವಿವಾರದಂದು ಸಾಯಂಕಾಲದ ಸತ್ಸಂಗಗಳು ನಡೆಯುತ್ತವೆ. ಸುಮಾರು 250 ಅಭ್ಯಾಸಿಗಳು ರವಿವಾರದ ಸತ್ಸಂಗದಲ್ಲಿ ಹಾಜರಿರುತ್ತಾರೆ. ಈ ಕೇಂದ್ರವು 'ಮುಕ್ತ-ಸಭೆಗಳು' ಅಭ್ಯಾಸಿ ಶಿಕ್ಷಣ ಕಾರ್ಯಕ್ರಮ ಹಾಗು VBSE ಚಟುವಟಿಕೆಗಳನ್ನು ನಿಯಮಿತವಾಗಿ ಆಯೋಜಿಸುತ್ತದೆ.



ಸ್ವಾಗತಕಕ್ಷ, ಹೊಸ ಅಭ್ಯಾಸಿಗಳಿಗಾಗಿ ಸಾಧನೆಯ ಬಗ್ಗೆ ಸ್ಪಷ್ಟೀಕರಣ ಕಾರ್ಯಕ್ರಮಗಳನ್ನು ಪ್ರತಿ ರವಿವಾರ ನಡೆಸಲಾಗುತ್ತದೆ. ಯುವಜನರ ಚರ್ಚಾ ಸತ್ರಗಳೂ ಸಹ ಒಂದು ನಿಯಮಿತ ಘಟಕವಾಗಿರುತ್ತದೆ. ಈ ಕೇಂದ್ರವು ಆಶ್ರಮ ಪರಿಸರದಲ್ಲಿ ಕಟ್ಟಡಗಳ ವಿಸ್ತಾರ ಮಾಡುವ ಯೋಜನೆಯನ್ನಿಟ್ಟುಕೊಂಡಿದೆ.

ಈ ಕೇಂದ್ರವು ಮಿಷನ್ನಿನ ಚೈತನ್ಯವನ್ನು ಮುಂದಿಟ್ಟುಕೊಂಡು ಜಿಲ್ಲ್ಯಾದ್ಯಂತ ಗುರುಗಳ ಸಂದೇಶವನ್ನು ಹಬ್ಬಿಸುವ ಕಾರ್ಯವನ್ನು ಮುಂದುವರಿಸುತ್ತಿದೆ.



**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**

© 2011 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.